ಸಂಪುಟ 01 | ಸಂಚಿಕೆ 68 | ಭಾನುವಾರ 18 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಥೆಸಾರಸ್ ದಿನ

1840 ರಲ್ಲಿ, ರೋಜೆಟ್ ವೈದ್ಯಕೀಯ ಕ್ಷೇತ್ರದಲ್ಲಿನ ಯಶಸ್ವಿ ವೃತ್ತಿಜೀವನದಿಂದ ನಿವೃತ್ತರಾದರು ಮತ್ತು ತಮ್ಮ ಜೀವನದ ಉಳಿದ ಭಾಗವನ್ನು ರೋಜೆಟ್‌ರ ಇಂಗ್ಲಿಷ್ ಪದಗಳು ಮತ್ತು ಪದಗುಚ್ಛಗಳ ಥೆಸಾರಸ್‌ನಲ್ಲಿ ಕೆಲಸ ಮಾಡಿದರು. ಈ ಕೆಲಸವು ದಶಕಗಳ ಕಾಲ ಪದಗಳ ಪಟ್ಟಿಗಳನ್ನು ಸಂಗ್ರಹಿಸಿ ಅವುಗಳನ್ನು ವರ್ಗೀಕರಿಸಿದ ಪರಿಣಾಮವಾಗಿದೆ, ವಿಜ್ಞಾನಿಗಳು ಮಾದರಿಗಳನ್ನು ಸಂಗ್ರಹಿಸುವಂತೆಯೇ. ರೋಜೆಟ್‌ರ ಪ್ರಕರಣದಲ್ಲಿ, ಅವರು ಪದಗಳನ್ನು ಸಂಗ್ರಹಿಸಿದರು. ಅವರು ಮೊದಲು 1852 ರಲ್ಲಿ ತಮ್ಮ ಥೆಸಾರಸ್ ಅನ್ನು ಪ್ರಕಟಿಸಿದರು. ಮತ್ತು ಇದು ಸಮಾನಾರ್ಥಕಗಳ ಪುಸ್ತಕಕ್ಕಿಂತ ಹೆಚ್ಚಿನದಾಗಿತ್ತು – ಇದು ಅರ್ಥದ ಮೂಲಕ ಪ್ರತಿಯೊಂದು ಪದದ ಸಂಪೂರ್ಣ ವರ್ಗೀಕರಣ ಮತ್ತು ಸಂಘಟನೆಯಾಗಿತ್ತು.

## ಸುಭಾಷಿತ

ನಿಮ್ಮನ್ನು ನೀವು ದುರ್ಬಲರೆಂದು ತಿಳಿದುಕೊಳ್ಳುವುದು ಅತಿದೊಡ್ಡ ಪಾಪ.

ಸ್ವಾಮಿ ವಿವೇಕಾನಂದ

# ಪಂಚರಾಜ್ಯಗಳ ಚುನಾವಣೆ ಹಿನ್ನೆಲೆಯಲ್ಲಿ ನಾಯಕತ್ವ ಬದಲಾವಣೆಗೆ ಬ್ರೇಕ್ ಹಾಕಿದ 'ಕೈ'ಕಮಾಂಡ್



ಬೆಂಗಳೂರು: ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಸದ್ಯದ ಮಟ್ಟಿಗೆ ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಯಾವುದೇ ಬದಲಾವಣೆ ಅಸಾಧ್ಯ ಎಂದು ಕಾಂಗ್ರೆಸ್ ಹೈಕಮಾಂಡ್ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸ್ಪಷ್ಟ ಸಂದೇಶ ರವಾನಿಸಿದೆ.

ಅಸ್ಸಾಂ, ಪಶ್ಚಿಮಬಂಗಾಳ, ಕೇರಳ, ತಮಿಳುನಾಡು ಮತ್ತು ಪುದುಚೇರಿ ರಾಜ್ಯಗಳ ವಿಧಾನಸಭೆ ಚುನಾವಣೆ ಪ್ರಕ್ರಿಯೆ ಮುಂದಿನ ಮೇ ಮತ್ತು ಜೂನ್ ವೇಳೆಗೆ ಪೂರ್ಣಗೊಳ್ಳಲಿದೆ. ಆವರೆಗೂ ಕರ್ನಾಟಕ ಸೇರಿದಂತೆ ಯಾವುದೇ ರಾಜ್ಯಗಳ ರಾಜಕೀಯದಲ್ಲಿ ಬದಲಾವಣೆ ಮಾಡುವುದಿಲ್ಲ. ರಾಷ್ಟ್ರ ರಾಜಕಾರಣದಲ್ಲೂ ಯಥಾಸ್ಥಿತಿ ಮುಂದುವರೆಯಲಿದೆಎಂದು ಸ್ಪಷ್ಟಪಡಿಸಿರುವುದಾಗಿ ತಿಳಿದು ಬಂದಿದೆ. ವಿಧಾನಸಭೆ ಚುನಾವಣೆ ಮುಗಿಯುವವರೆಗೂ ನಾಯಕತ್ವ ಬದಲಾವಣೆ ವಿಷಯವಾಗಲಿ ಅಥವಾ ಬೇರೆ ವಿಚಾರಗಳ ಚರ್ಚೆ ಬೇಡ. ರಾಜ್ಯ ರಾಜಕಾರಣದಲ್ಲೂ ಗೊಂದಲಗಳಾಗದಂತೆ ಎಚ್ಚರಿಕೆ ವಹಿಸುವಂತೆ ಡಿ.ಕೆ.ಶಿವಕುಮಾರ್ ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಹೇಳಲಾಗಿದೆ. ಅಸ್ಸಾಂ ವಿಧಾನಸಭೆ ಚುನಾವಣೆ ಸಂಬಂಧಪಟ್ಟಂತೆ ನಿನ್ನೆ ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಅಸ್ಸಾಂನ ಸ್ಥಳೀಯ ನಾಯಕರ ಮಹತ್ವದ ಸಭೆ ನಡೆದಿತ್ತು.

ಬಳಿಕ ಡಿ.ಕೆ.ಶಿವಕುಮಾರ್ ಜೊತೆ ಹೈಕಮಾಂಡ್ ನಾಯಕರು ಮಹತ್ವದ ಚರ್ಚೆ ನಡೆದಿದ್ದಾರೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೇಸಿ ವೇಣುಗೋಪಾಲ್ ಹೈಕಮಾಂಡ್‌ನ ಸಂದೇಶವನ್ನು ರವಾನಿಸಿದ್ದಾರೆ ಎನ್ನಲಾಗಿದೆ. ಅಸ್ಸಾಂ ಚುನಾವಣೆಯ ಉಸ್ತುವಾರಿ ನಿರ್ವಹಣೆಯನ್ನು ಡಿ.ಕೆ. ಶಿವಕುಮಾರ್ ಅವರಿಗೆ ವಹಿಸಲಾಗಿದೆ. ಚುನಾವಣೆಯ ತಯಾರಿ ಕುರಿತ ಪೂರ್ವಭಾವಿ ಸಭೆಯಲ್ಲಿ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಹೆಚ್ಚಿನ ಮನ್ನಣೆ ನೀಡಿರುವುದು ಕಂಡುಬಂದಿದೆ. ಮೂಲಗಳ ಪ್ರಕಾರ ಡಿ.ಕೆ.ಶಿವಕುಮಾರ್ ಅವರನ್ನು ರಾಷ್ಟ್ರ ರಾಜಕಾರಣದತ್ತ ಬರಲು ಹೈಕಮಾಂಡ್ ನಾಯಕರು ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಮುಂದಿನ ಅವಧಿಗೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತವಾಗಿದೆ. ಮುಂದಿನ ಚುನಾವಣೆಗಳಲ್ಲಿ ಯಾವುದೇ ಪಕ್ಷದ ಜೊತೆ ಮೈತ್ರಿ ಇಲ್ಲದೆ ಸ್ವತಂತ್ರವಾಗಿ ಚುನಾವಣೆ ನಡೆಸಿದರೆ ಗೆಲ್ಲುವ ಎಲ್ಲಾ ಸಾಧ್ಯತೆಗಳಿವೆ. ನೀವು ರಾಷ್ಟ್ರ ರಾಜಕಾರಣಕ್ಕೆ ಬಂದರೆ ಹೆಚ್ಚಿನ ಅವಕಾಶಗಳಿವೆ ಎಂದು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಬಜೆಟ್ 4ನೇ ಪುಟಕ್ಕೆ

## ಸಿಟಿ ಪ್ರದೇಶದಲ್ಲಿ ಜನವರಿ 19ರಂದು ವಿದ್ಯುತ್ ವ್ಯತ್ಯಯ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ಜನವರಿ 17 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-1ರ 100 ಕೆವಿ ವಿದ್ಯುತ್ ಪರಿವರ್ತಕ ಆರ್.ಟಿ.ಓ ಆಫೀಸ್ ಬಸ್ ಸ್ಟ್ಯಾಂಡ್ ಟಿ.ಸಿ ಮತ್ತು 25 ಕೆ.ವಿ. ವಿದ್ಯುತ್ ಪರಿವರ್ತಕ ಅಶೋಕ ನಗರ ಎಲ್.ಟಿ ಲೈನ್ ಮಾರ್ಗ ಬದಲಾವಣೆ ನಿರ್ವಹಿಸುತ್ತಿರುವುದರಿಂದ ಆರ್.ಟಿ.ಓ ಆಫೀಸ್, ಯಂಕಣ್ಣ ಯಾದವ್ ರೆಸ್ಟೋರೆಂಟ್,

ಅಶೋಕ ನಗರ ಹಾಗೂ ಸುತ್ತಲಿನ ಪ್ರದೇಶದಲ್ಲಿ ಜನವರಿ 19ರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532-226386 ಅಥವಾ 08532-231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪುರಸಭೆ ನೂತನ ಅಧ್ಯಕ್ಷರಾಗಿ ಮಂಜುನಾಥ ಮೇಗೂರು, ಉಪಾಧ್ಯಕ್ಷರಾಗಿ ಸುಜಾತ ನಾಗರಾಜ ಆಯ್ಕೆ



❏ ನೈಜ್ಯ ದೆಸೆ ನ್ಯೂಸ್

ಕಾರಟಗಿ: ಪಟ್ಟಣದ ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಗಳಿಗೆ ಉಳಿದ ಅವಧಿಗಾಗಿ ನೂತನ ಅಧ್ಯಕ್ಷರಾಗಿ ಮಂಜುನಾಥ ಮೇಗೂರು, ಉಪಾಧ್ಯಕ್ಷರಾಗಿ ಸುಜಾತ ನಾಗರಾಜ ಶುಕ್ರವಾರ ಆಯ್ಕೆಯಾದರು.

ಕಾರಟಗಿ ತಹಶೀಲ್ದಾರ್ ಎಂ. ಕುಮಾರಸ್ವಾಮಿ ನೇತೃತ್ವದಲ್ಲಿ ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ನಿರೀಕ್ಷೆಯಂತೆಯೇ ಆಯ್ಕೆ ನಡೆಯಲಾಗಿದೆ. ಹಿಂದುಳಿದ ವರ್ಗ ಆ ಕ್ಕೆ ಮೀಸಲಾದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ನಿಂದ ಮಂಜುನಾಥ ಮೇಗೂರು ಮತ್ತು ಪರಿಶಿಷ್ಟ ಜಾತಿಗೆ ಮೀಸಲಾದ ಉಪಾಧ್ಯಕ್ಷ ಸ್ಥಾನಕ್ಕೆ ಸುಜಾತ ನಾಗರಾಜ ಮತ್ತು ಬಿಜೆಪಿ ಯಿಂದ ಅಧ್ಯಕ್ಷ ಸ್ಥಾನಕ್ಕೆ ಮೌನಿಕಾ ಧನಂಜಯ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಆನಂದ ದೊಡ್ಡಮನಿ ನಾಮಪತ್ರ ಸಲ್ಲಿಸಿದರು. ನಾಮಪತ್ರ ಪರಿಶೀಲಿಸಿದ ಚುನಾವಣಾ ಅಧಿಕಾರಿ ಅಂತಿಮವಾಗಿ ಚುನಾವಣೆ ನಡೆಸಿದರು.

ಒಟ್ಟು 23 ಜನ ಸದಸ್ಯರು ಹಾಗೂ ಶಾಸಕರು, ಸಂಸದರು ಸೇರಿ 25 ಜನರಿದ್ದರು. ಆದರೆ ಈ ಪೈಕಿ ಬಿಜೆಪಿಯ ಮೂರು ಜನ ಸದಸ್ಯರು ಕಾಂಗ್ರೆಸ್ ನಲ್ಲಿ ಗುರುತಿಸಿ ಕೊಂಡಿದ್ದರಿಂದ ಗೈರಾಗಿದ್ದರು. ಕಾಂಗ್ರೆಸ್ ಅಭ್ಯರ್ಥಿ ಗಳು ತಲಾ 13 ಮತ ಪಡೆದು ಜಯ ಗಳಿಸಿದರೆ. ಬಿಜೆಪಿ ಇಬ್ಬರು ಅಭ್ಯರ್ಥಿಗಳು ತಲಾ 9 ಮತ ಪಡೆದು ಪರಾಭವಗೊಂಡರು. ಈ ಸಂದರ್ಭದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಚಿವ ಶಿವರಾಜ ತಂಗಡಗಿ, ಸಂಸದ ರಾಜಶೇಖರ್ ಹಿಟ್ನಾಳ್ ಅವರು ಹೂಮಾಲೆ ಹಾಕಿ ಶುಭಾಶಯ ಕೋರಿದರು. ಬಳಿಕ ಪುರಸಭೆ ಬಳಿ ನೆರೆದಿದ್ದ ನೂರಾರು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

## ಸಂಸ್ಕೃತಿ ಪ್ರತಿಬಿಂಬಿಸುವ ಸುಗ್ಗಿ ಉತ್ಸವ, ಮಕ್ಕಳಿಂದ ವಿವಿಧ ಅಲಂಕಾರ, ವೇಷ ಭೂಷಣ



❏ ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕಿನ ಹಾಲಾಪೂರದ ದಿ ಬೆಸ್ಟ್ ಪಬ್ಲಿಕ್ ಶಾಲೆಯಲ್ಲಿ ವಿನೂತನ, ವಿಶಿಷ್ಟಪೂರ್ಣ ಸುಗ್ಗಿ ಉತ್ಸವ ಕಾರ್ಯಕ್ರಮ ತೊರಳು ತೋರಣಗಳಿಂದ,ಹೂ ಅಲಂಕಾರಗಳಿಂದ ಶಾಲೆ ಕಂಗೊಳಿಸುತ್ತಿತ್ತು. ಕಾರ್ಯಕ್ರಮದ ಪೂಜೆಯನ್ನು ಬಸವರಾಜ ಸ್ವಾಮಿ ನೆರವೇರಿಸಿದರು.

ಉದ್ಘಾಟನೆಯನ್ನು ಶ್ರೀ ದಂಡಗುಂಡಪ್ಪ ತಾತ ಜಂಗಮರಹಳ್ಳಿ ಅವರಿಂದ ನಡೆಯಿತು.ನಂತರ ಮುಖ್ಯಗುರು ರವಿಕುಮಾರ ತೋರಣದಿನ್ನಿ ಮಾತಾಡುತ್ತಾ ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ ಇಡಿ ವಿಶ್ವವೇ ಮೆಚ್ಚುವಂತದ್ದು, ಭಾರತ ವಿವಿಧತೆಯಲ್ಲಿ ಏಕತೆ ಹೊಂದಿರುವ ದೇಶ, ಅನೇಕ ಆಚಾರ, ವಿಚಾರ ಕಾಣುತ್ತೇವೆ, ಇಂದು ಆಧುನಿಕ ಜೀವನಶೈಲಿ ಭರಾಟೆಯಲ್ಲಿ ಗ್ರಾಮೀಣ ಬದುಕಿನ ಸೊಗಡು ಮಾಯವಾಗುತ್ತಿದ್ದು, ಮೊಬೈಲ್, ಟಿವಿ ಇವುಗಳೇ ನಮ್ಮ ಪರಂಪರೆಗೆ ಮಾರಕವಾಗುತ್ತಿದ್ದು, ಅದಕ್ಕೆ ಇಂದಿನ ಯುವ ಪೀಳಿಗೆಗೆ ನಮ್ಮ ಗತವೈಭವ ಸಾರುವ ಪರಂಪರೆಯನ್ನು ಉಳಿಸುವ ಬೆಳೆಸುವ ನಿಟ್ಟಿನಲ್ಲಿ ನಮ್ಮ ಶಾಲೆಯಲ್ಲಿ ಕಳೆದ ವರ್ಷದಿಂದ ಸುಗ್ಗಿ ಉತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಎಂದು ಮುಖ್ಯಗುರು ರವಿಕುಮಾರ ತೋರಣದಿನ್ನಿ ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಉಪಾಧ್ಯಕ್ಷರಾದ ಕೆ ಶೇಖರಪ್ಪ, ಕಾರ್ಯದರ್ಶಿ ಸಿದ್ದು, ಗ್ರಾಮದ ಮುಖಂಡರು, ಪಾಲಕ ಪೋಷಕರು, ಶಿಕ್ಷಕರಾದ ಕೃಷ್ಣಕುಮಾರ, ಕುಪ್ಪಣ್ಣ, ದೇವೇಂದ್ರಕುಮಾರ, ಶಿಕ್ಷಕಿಯರು ಇದ್ದರು. ಕಾರ್ಯಕ್ರಮ ನಂತರ ಮಕ್ಕಳಿಂದ ವಿವಿಧ ವೇಷ ಭೂಷಣಗಳೊಂದಿಗೆ ನೃತ್ಯ, ಡೊಳ್ಳು, ಗಾಯನ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯುತ್ತಮವಾಗಿ ಮೂಡಿ ಬಂದವು.

## ತಾ. ಕಾಂಗ್ರೆಸ್ ಪಕ್ಷದ ವಕ್ತಾರರಾಗಿ ರಾಜು ನಾಯಕ ನೇಮಕ

❏ ನೈಜ್ಯ ದೆಸೆ ನ್ಯೂಸ್

ಅರಕೇರಾ: ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅರಕೇರಾ ತಾಲೂಕಿನ ಕಾಂಗ್ರೆಸ್ ಪಕ್ಷದ ನೂತನ ವಕ್ತಾರರನ್ನಾಗಿ ಪಟ್ಟಣದ ನಿವಾಸಿ ರಾಜಕುಮಾರ ತಂದೆ ಕರಿಯಣ್ಣ ಇವರನ್ನು ನೇಮಕ ಮಾಡಿದ್ದಾರೆ.

ಪಕ್ಷದ ಸಂಘಟನೆ ತತ್ವ, ಸಿದ್ಧಾಂತ ,ನೀತಿ ಮತ್ತು ನಿಯಮಗಳನ್ನು ಅನುಸರಿಸಿಕೊಂಡು ಹಲವು ವರ್ಷಗಳಿಂದ ಪಕ್ಷದ ಸಂಘಟನೆಯಲ್ಲಿ. ಸಕ್ರಿಯವಾಗಿ ತೊಡಗಿಸಿಕೊಂಡು ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ, ಈ ಜವಬ್ದಾರಿಯನ್ನು ವಹಿಸಿಕೊಂಡು ಕಾಂಗ್ರೆಸ್ ಪಕ್ಷವನ್ನು ಮುಂಬರುವ ಚುನಾವಣೆಗಳಲ್ಲಿ ಇನ್ನಷ್ಟು ಬಲವರ್ಧನೆಗೆ ಶ್ರಮಿಸುವಂತೆ ಸೂಚಿಸುವ ಮೂಲಕ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಬಸವರಾಜ ಪಾಟೀಲ್ ಇಟಗಿಯವರು ಆದೇಶ ಹೊರಡಿಸಿದ್ದಾರೆ.



ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಬಸವರಾಜ ಪೂಜಾರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರೇಶ್ ನಾಯಕ ಶಾಖೆ, ಶಂಕ್ರಪ್ಪ ಪವಾರ್ ಬಂಡೇಗುಡ್ಡ, ರಂಗಪ್ಪ ತುಮನಮರಡಿ, ಸೂಗೂರೇಶ ಹೂಗಾರ, ರಾಘವೇಂದ್ರ ಪೂಜಾರಿ, ರಂಗಪ್ಪ ಜಾಲಹಳ್ಳಿ ಇವರುಗಳು ಅಭಿನಂದಿಸಿದರು.

## ಜ.18 ರಂದು ಅಲೆಮಾರಿಗಳ ಬೃಹತ್ ಸಾಂಸ್ಕೃತಿಕ ಕಲಾ ಪ್ರದರ್ಶನ ಮತ್ತು ಸ್ವಾಭಿಮಾನ ಸಮಾವೇಶ: ಮಹಾದೇವಪ್ಪ

❏ ನೈಜ್ಯ ದೆಸೆ ನ್ಯೂಸ್




ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯ ಅಲೆಮಾರಿ ಪ.ಜಾ. ಚನ್ನದಾಸರ್, ಹೊಲೆಯಾದಾಸರ್, ಮಾಲದಾಸರಿ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು ರಾಜ್ಯ ಕಾರ್ಯದರ್ಶಿ ಮಹಾದೇವಪ್ಪ ಮಾತನಾಡಿ ಈ ದೇಶದ ಮೂಲ ನಿವಾಸಿಗಳಾಗಿ ಸದಾ ಅಲೆಮಾರಿಗಳಾಗಿ ಊರ ಹೋರಗಿನ ಗುಡಿಸಲುಗಳಲ್ಲಿ ವಾಸ ಮಾಡುತ್ತ ದೇಶದ ಸಾಂಸ್ಕೃತಿ, ಇತಿಹಾಸವನ್ನು, ಪರಂಪರೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಚನ್ನದಾಸರ್, ಹೊಲೆಯಾದಾಸರ್, ಮಾಲದಾಸರಿ ಅಲೇಮಾರಿ ಸಮುದಾಯಗಳು ಸದಾ ಹರಿನಾಮ ಸ್ಮರಣೆ ಮಾಡುತ್ತಾ ಏಕತಾರಿ, ಶಂಖ, ಜಾಗಟೆ, ಗಳನ್ನು ಹಿಡಿದು ಅಲೆಯುತ್ತ ಜೀವನಕ್ಕಾಗಿ ಭೀಕ್ಷಾಟನೆ ಮಾಡುವ ರಾತ್ರಿ ವೇಳೆ ಬಯಾಲು ನಾಟಕ ಪ್ರದರ್ಶನದಲ್ಲಿ ತಾಳ ಮದ್ದಲಿ,

ಪೀಟಿಲು ನುಡಿಸುತ್ತ ಜೀವನ ಸಾಗಿಸುವ ನಮ್ಮ ಸಮುದಾಯದವರು ಇಂದಿಗೂ ಕೂಡ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿದ್ದರು ಕೂಡ ಒಳ ಮೀಸಲಾತಿಯಲ್ಲಿ ಶೇ1 ರ ವಿಶೇಷ ಸ್ಥಾನಮಾನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೇಶದ ಸರ್ವೋಚ್ಚ ನ್ಯಾಯಾಲಯದ ಅದೇಶದ ನಂತರವು ನೀಡದೆ ಸಮುದಾಯವನ್ನು ಮೀಸಲಾತಿಯ ಸೌಲಾಭ್ಯಗಳಿಂದ ವಂಚಿಸುತ್ತಿದೆ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಯೋಗವು ನೀಡಿರುವ ಒಳಮೀಸಲಾತಿ ವರದಿಯಂತೆ ನಮ್ಮ ಸಮುದಾಯದವರಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಪಟ್ಟಣದ ಶ್ರೀ ಸತ್ಯಸಾಯಿ ಗಾರ್ಡನ್ ನಲ್ಲಿ ಜ.18 ರಂದು ಬೆ.10ಕ್ಕೆ ಅಲೆಮಾರಿಗಳ ಬೃಹತ್ ಸಾಂಸ್ಕೃತಿಕ ಕಲಾ ಪ್ರದರ್ಶನ ಮತ್ತು ಸ್ವಾಭಿಮಾನ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದ್ದು ನಮ್ಮ ಬೇಡಿಕೆಗಳಾದ ರಾಜ್ಯ ಸರ್ಕಾರವು ನಮ್ಮ ಸಮುದಾಯದ ಭೂರಹಿತ ಅಲೆಮಾರಿಗಳಿಗೆ ಭೂಮಿ,ವಸತಿ ನೀಡಬೇಕು,

ಅಲೆಮಾರಿ ನಿಗಮ ಮಂಡಳಿ ರಚನೆ ಮಾಡಿ 5ನೂರು ಕೋಟಿ ಅನುದಾನ ನೀಡಬೇಕು, ಅಲೆಮಾರಿ ಸಮುದಾಯದವರ ಕಲೆಗಳ ಪ್ರದರ್ಶನಕ್ಕೆ ಸಾಂಸ್ಕೃತಿಕ ಭವನಗಳನ್ನು ನಿರ್ಮಾಣ ಮಾಡಿ ಮುಂದಿನ ಪೀಳಿಗೆಗೆ ನಮ್ಮ ಕಲೆಗಳ ಬಗ್ಗೆ ತರಬೇತಿ ನೀಡಬೇಕು,ಅಲೆಮಾರಿ ಸಮುದಾಯಗಳ ಕುಟುಂಬದಲ್ಲಿನ ಮಕ್ಕಳಿಗೆ ಜಿಲ್ಲಾ ಮಟ್ಟದ ವಸತಿ ನಿಲಯಗಳನ್ನು ಪ್ರಾರಂಭಿಸಬೇಕು,ತಾಂತ್ರಿಕ ಮತ್ತು ವೃತ್ತಿ ಶಿಕ್ಷಣ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನೀಡುವ ತರಬೇತಿಯಲ್ಲಿ ಮೀಸಲಾತಿ ಕಲ್ಪಿಸಬೇಕು, ಅಲೆಮಾರಿ ಗ್ರಂಥಾಲಯಗಳನ್ನು ವಿಸ್ತರಿಸಬೇಕು,ಅಲೆಮಾರಿ ಮಹಿಳೆಯರು ಸ್ವಾವಲಂಬಿ ಬದುಕಿಗಾಗಿ ಆರ್ಥಿಕ ನೆರವನ್ನು ನೀಡಬೇಕು ಎಂದು ಒತ್ತಾಯಿಸಿ ರಾಜ್ಯದ ಮುಖ್ಯಮಂತ್ರಿಗಳಿಗೆ ಸಮಾವೇಶದಲ್ಲಿ ರಾಜ್ಯ ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಹಾಗೂ ಶಾಸಕ ಹಂಪಯ್ಯನಾಯಕ ರವರಿಗೆ ಮನವಿ ಸಲ್ಲಿಸಲಾಗುವುದು.

ಹಾಗೂ ಸಮುದಾಯದ ಪ್ರಶಸ್ತಿ ಪುರಸ್ಕೃತರಿಗೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಪ.ಜಾತಿ,ಪ.ಪಂಗಡ,ಅಲೆಮಾರಿ ಅಭಿವೃದ್ಧಿ ನಿಗಮ ಬೆಂಗಳೂರಿನ ಅಧ್ಯಕ್ಷರಾದ ಜಿ.ಪಲ್ಲವಿ, ಕರ್ನಾಟಕ ರಾಜ್ಯ ಅಲೆಮಾರಿ ಪ.ಜಾ. ಚನ್ನದಾಸರ್, ಹೊಲೆಯಾದಾಸರ್, ಮಾಲದಾಸರಿ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು ರಾಜ್ಯಾಧ್ಯಕ್ಷರಾದ ಡಾ.ವಿ.ಚಲಪತಿ, ಕರ್ನಾಟಕ ಜನಪದ ವಿಶ್ವವಿದ್ಯಾಲಯ ಗುತ್ತಗುಡಿಯ ಸಂಶೋಧನಾಧಿಕಾರಿ ಡಾ.ಮಲ್ಲಿಕಾರ್ಜುನ ಮಾನ್ಪಡೆ ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ಗಂಗಾಧರನಾಯಕ, ರಾಜಾ ವೆಂಕಟಪ್ಪ ನಾಯಕ, ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ಬೆಂಗಳೂರಿನ ಜಂಟಿ ಕಾರ್ಯದರ್ಶಿ ಆನಂದಕುಮಾರ್ ಏಕಲವ್ಯ,ಹಿರಿಯ ದಲಿತ ಪರ ಹೋರಾಟಗಾರಾದ ಅಂಬಣ್ಣ ಅರೋಲಿಕರ್, ಎಸ್,ಮಾರೆಪ್ಪ, ಬಾಲಸ್ವಾಮಿ ಕೋಡ್ಲಿ ಸೇರಿದಂತೆ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯಯುವ ಘಟಕದ ರಾಜ್ಯಾಧ್ಯಕ್ಷರಾದ ಬಿ.ಉಮೇಶ ಯಾಪಲದಿನ್ನಿ.ಬುಡ್ಗ ಜಂಗಮ ರಾಜ್ಯ ಸಂಚಾಲಕರಾದ ಮಹಾಂತೇಶ್ ಸಿಕಲ್, ಬಿ,ನಾಗಪ್ಪ ಬಾಯಿದೊಡ್ಡಿ, ಎಸ್. ವೆಂಕೋಬ, ಯಲ್ಲಪ್ಪ,ಬಸವರಾಜ, ಪ್ರದೀಪ್ ,ರಮೇಶ,ರಾಮಕೃಷ್ಣ ಇದ್ದರು.

## ಸಾಹಿತ್ಯ ಸಿಂಚನ

ಗಂಡನ ಗೋಳು..!
(ಅರ್ಥಾತ್ ಪತಿ ಪ್ರಲಾಪ)

ದೇವ ಇಂಥ ಹೆಂಡಿರ ಕೂಡ, ಕೇಳ
ಹ್ಯಾಂಗ ಬಾಳುವೆ ಮಾಡಲಿ ಹೇಳ.?
ನಿತ್ಯವು ಬಿಡುತಾಳ ತರಾವರಿ ಹುಳ
ಹೇಳಲಿ ಯಾರಿಗೆ ಬಾಳಿನ ಗೋಳ.?

ಓಡಾಡೆಂದರೆ ಕಾಲುನೋವಂತಾಳ
ಮಾತಾಡೆಂದರೆ ಬಾಯ್ನೋವಂತಾಳ
ನೋಡೆಂದರೆ ಕಣ್ಣುಬ್ಯಾನೆ ಅಂತಾಳ
ಕೇಳೆಂದರೆ ಕಿವಿ ಬ್ಯಾನೆ ಅಂತಾಳ.!

ನಿಂತರೆ ಮಂಡಿ ನೋವೆಂತಾಳ
ಕುಂತರೆ ನಡು ನೋವೆಂತಾಳ
ಬಿಸಿಲು ಬಿದ್ರೆ ವಾತ ಅಂತಾಳ
ನೆರಳಲಿ ಇದ್ರೆ ಶೀತ ಅಂತಾಳ.!

ಪಾತ್ರೆ ಉಜ್ಜಿದ್ರೆ ಕೈನೋವಂತಾಳ
ಕಸಗುಡಿಸಿದ್ರೆ ನೆತ್ತಿ ನೋವಂತಾಳ
ಒಲೆ ಹಚ್ಚಿದ್ರೆ ಧಗೆಧಗೆ ಅಂತಾಳ
ಬಟ್ಟೆ ಒಗೆದರೆ ಚಳಿಚಳಿ ಅಂತಾಳ!

ಒಂದು ತುತ್ತು ಹೆಚ್ಚಾದ್ರು ಕೂಡ
ಹಲ್ಲುಗಳಿಗೆ ಸುಸ್ತಾಗ್ತದೆ ಅಂತಾಳ
ಹಿಡಿ ಗಾಳಿ ಹೆಚ್ಚಾದ್ರೂ ಕೂಡ
ನಾಸಿಕಕೆ ತ್ರಾಸಾಗ್ತದೆ ಅಂತಾಳ.!

ಮನೆಯೊಳಗಿದ್ರೆ ಮೂಳ ಅಂತಾಳ
ಹೊರಹೋದ್ರೆ ಉಡಾಳ ಅಂತಾಳ
ಮಾತಾಡಿಸಿದ್ರೆ ಸಿರ‍್ರಂತ ಸಿಡಕ್ತಾಳ
ಸುಮ್ಮನೆ ಇದ್ರೆ ಗುರ‍್ರಂತ ಗುಡುಗ್ತಾಳ.!

ಎಲ್ಲಾರ ಕೂಡ ಕಿಸಿಕಿಸಿ ಕಿಸಿತಾಳ
ನನ್ನ ಕಂಡ್ರ ನಿಗಿ ನಿಗಿ ಉರಿತಾಳ
ಅವಳು ಹೀಂಗ್ಯಾಕ ಆಗವಳ ಹೇಳ
ನನ ಹೆಂಡ್ರು ಹೀಂಗ್ಯಾಕಾಗವಳ.?

ಎ.ಎನ್.ರಮೇಶ್.ಗುಬ್ಬಿ.

## ಮಸ್ಕಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆರ್ ಸಿದ್ದನಗೌಡರಿಂದ ರೈತರಿಗೆ ತಾಡಪಲ್ ವಿತರಣೆ

### ಸರ್ಕಾರದ ಯೋಜನೆಗಳು ರೈತರಿಗೆ ಸಕಾಲದಲ್ಲಿ ತಲುಪುವಂತೆ ಅಧಿಕಾರಿಗಳು ಗಮನಹರಿಸಿ :ಆರ್. ಸಿದ್ದನಗೌಡ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಸರ್ಕಾರ ರೈತರಿಗಾಗಿ ಬೀಜ, ಗೊಬ್ಬರ ಸೇರಿದಂತೆ ಹಲವಾರು ಸಬ್ಸಿಡಿ ಯೋಜನೆಗಳನ್ನು ನೀಡುತ್ತಿದ್ದು ಅವುಗಳನ್ನು ಸದುಪಯೋಗಪಡಿಸಿಕೊಂಡು ರೈತರು ಆರ್ಥಿಕವಾಗಿ ಸದೃಢ ರಾಗಬೇಕು ಎಂದು ಮಸ್ಕಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆರ್ ಸಿದ್ದನಗೌಡ ತುರುವಿಹಾಳ ಹೇಳಿದರು.

ಮಸ್ಕಿ ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ಶನಿವಾರ ತಾಡಪಲ್ ಗಳನ್ನು ವಿತರಿಸಿ ನಂತರ ಮಾತನಾಡಿದ ಅವರು ಸರ್ಕಾರದಲ್ಲಿ ದೊರೆಯುವಂತ ಸಬ್ಸಿಡಿ ಯೋಜನೆಗಳನ್ನು ರೈತರಿಗೆ ಸಕಾಲದಲ್ಲಿ ವಿತ–ರಿಸುವ ಅಗತ್ಯ ಕ್ರಮಗಳನ್ನು ಕೃಷಿ ಅಧಿಕಾ–ರಿಗಳು ಕೈಗೊಳ್ಳಬೇಕು ಹಾಗೂ ಯಾವುದೇ ರೀತಿಯಲ್ಲಿ ರೈತರಿಗೆ ಅಲೆದಾಡಿಸುವ ಕೆಲಸ ಮಾಡಬಾರದು ಎಂದು ಹೇಳಿದರು. ರೈತ–ರಿಗಾಗಿ ಬರುವ ಯಾವುದೇ ಯೋಜನೆಗಳಿರಲಿ ವಿಳಂಬ ಮಾಡದೆ ರೈತರಿಗೆ ತಲುಪಿಸುವ ಕೆಲಸ ರೈತ ಸಂಪರ್ಕ ಕೇಂದ್ರದ ಅಧಿಕಾ–ರಿಗಳು ಮಾಡಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ವಿವಿಧ ಮುಖಂಡರು ಇದ್ದರು.



**ಗ್ರಂಥಾಲಯಕ್ಕೆ ಆರ್ ಸಿದ್ದನಗೌಡ ಭೇಟಿ. ಮೂಲಸೌಕರ್ಯ ಪರಿಶೀಲನೆ**

ಮಸ್ಕಿ ಪಟ್ಟಣದಲ್ಲಿರುವ ಹೈಟೆಕ್ ಡಿಜಿಟಲ್ ಗ್ರಂಥಾಲಯಕ್ಕೆ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆರು ಸಿದ್ದನಗೌಡ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಗ್ರಂಥಾಲಯಕ್ಕೆ ಬರುವ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳು ಒದಗಿಸಿ ವಿದ್ಯಾರ್ಥಿಗಳಿಗೆ ಓದಲು ತೊಂದರೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಗ್ರಂಥಾಲಯದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಲ್ಲದೆ ವಿದ್ಯಾರ್ಥಿಗಳು ಸಹ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಅತ್ಯಂತ ಮುತುವರ್ಜಿ ವಹಿಸಿ ಓದಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಂಥಾಲಯದ ಅಧಿಕಾರಿಗಳು ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



## ಪಂಚ ಗ್ಯಾರಂಟಿ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಅಧಿಕಾರಿಗಳು ಮುಂದಾಗಬೇಕು: ವೈ.ಅನಿಲಕುಮಾರ.



ನೈಜ್ಯ ದೆಸೆ ನ್ಯೂಸ್

ರಾಜ್ಯ ಸರ್ಕಾರ ಚುನಾವಣೆ ಪೂರ್ವದಲ್ಲಿ ಜನರಿಗೆ ನೀಡಿದ ಭರವಸೆಯಂತೆ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ, ಶಕ್ತಿ ಯೋಜನೆ ಸೇ–ರಿದಂತೆ ಕಾಂಗ್ರೆಸ್ ಸರ್ಕಾರದ ಪ್ರತಿಯೊಂದು ಯೋಜನೆಗಳು ಸಾಕಾರಗೊಂಡು ರಾಜ್ಯದಲ್ಲಿ ಸಫಲತೆ ಕಾಣಬೇಕು. ಎಂಬ ದೃಷ್ಟಿಕೋನದಿಂದ ಯೋಜನೆಗಳನ್ನು ಜಾರಿಗೆ ತಂದಿದೆ. ಇದನ್ನು ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಿ ಮೇಲ್ವಿಚಾರಣೆ ಮಾಡಬೇಕು ಎಂದು ಪಂಚ ಗ್ಯಾರಂಟಿ ಯೋಜನೆ ಸಮಿತಿ ತಾಲೂಕು ಅಧ್ಯಕ್ಷರಾದ ವೈ.ಅನೀಲಕುಮಾರ ತಿಳಿಸಿದರು.

ಶನಿವಾರದಂದು ತಾಲೂಕು ಪಂಚಾಯತಿಯ ಸಭಾಂಗಣದಲ್ಲಿ ಪಂಚ ಗ್ಯಾರಂಟಿಗಳ ಸಮರ್ಪಕ ಅನುಷ್ಠಾನಕ್ಕಾಗಿ ವಿವಿಧ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಚುನಾವಣೆಯಲ್ಲಿ ಕೊಟ್ಟಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಎಲ್ಲಾ ವರ್ಗದ ಜನ ಸಾಮಾನ್ಯರಿಗೆ ನೀಡುತ್ತಿದ್ದು ಸಂಬಂಧಪಟ್ಟಂತ ತಾಲೂಕು ಮಟ್ಟದ ಅಧಿಕಾರಿಗಳು ಸಮರ್ಪಕವಾಗಿ ಅನುಷ್ಠಾನಕ್ಕೆ ತನ್ನಿ ಎಂದು ಅಧಿಕಾರಿಗಳಿಗೆ ಹೇಳಿದರು. ನಂತರ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯಾದ ಚಂದ್ರಶೇಖರ ಅವರು ಮಾತನಾಡಿ, ಗೃಹಲಕ್ಷ್ಮಿ:– ಯೋಜನೆ ಸಿಂಧನೂರು ವಿಭಾಗದಲ್ಲಿ 72,395 ನೋಂದಣಿಯಾಗಿದ್ದು, 72,041 ಫಲಾನುಭವಿಗಳ ಖಾತೆಗೆ ಹಣ ಜಮವಾಗಿದೆ. ಇಲ್ಲಿ ತನಕ ಫಲಾನುಭವಿಗಳಿಗೆ 345,79,68,000 ವೆಚ್ಚವಾಗಿದೆ ಎಂದು ಸಭೆಗೆ ತಿಳಿಸಿದರು. ಅನ್ನ ಭಾಗ್ಯ:– ಸಿಂಧನೂರು ತಾಲೂಕಿನ 158 ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯ ಪಡೆದ ಸದಸ್ಯರ ಸಂಖ್ಯೆ 2,75,238 ಶೇ.90 ರಷ್ಟು ಗುರಿ ಕಂಡಿದೆ ಎಂದರು. ಶಕ್ತಿ ಯೋಜನೆ:– ಮಹಿಳೆಯರು ಪ್ರತಿತಿಂಗಳು 3.10 ಲಕ್ಷ ಮಹಿಳೆಯರು ಪ್ರಯಾಣಿಸುತ್ತಿದ್ದಾರೆ. ಗೃಹ ಜ್ಯೋತಿ:– ಗ್ರಾಮೀಣ ಭಾಗದಲ್ಲಿ 29,520 ಮೀಟರ್ ಗಳು ಹಾಗೂ ನಗರದ ಪ್ರದೇಶದಲ್ಲಿ 19,526 ಮೀಟರ್ ಇವೆ ಮತ್ತು ಯುವನಿಧಿ ಕುರಿತಾಗಿ ಮಾಹಿತಿಯನ್ನು ಸಭೆಗೆ ನೀಡಿದರು. ಸಭೆಯಲ್ಲಿ ಅಧಿಕಾ–ರಿಗಳು, ಸಮಿತಿ ಸದಸ್ಯರು ಭಾಗವಹಿಸಿದ್ದರು.

## ಶಾಸಕದ್ವಯರು ಅಧಿವೇಶನದಲ್ಲಿ ಸಿಂಧನೂರು ಜಿಲ್ಲಾ ಕೇಂದ್ರವಾಗಲು ಧ್ವನಿ ಎತ್ತಲು ಕರವೇ ಒತ್ತಾಯ.

ನೈಜ್ಯ ದೆಸೆ ನ್ಯೂಸ್

ಜನವರಿ 22 ರಿಂದ 31ರವರೆಗೆ ಬೆಂಗಳೂರಿನಲ್ಲಿ ನಡೆಯುವ ವಿಧಾನ ಮಂಡಲದ ಅಧಿವೇಶನದಲ್ಲಿ ರಾಜಕೀಯ ಮುಖಂಡರು ಸಿಂಧನೂರು ಜಿಲ್ಲೆ ರಚನೆ ಕುರಿತೆ ಶಾಸಕ ಹಂಪನಗೌಡ ಬಾದರ್ಲಿ ಹಾಗೂ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಧ್ವನಿ ಎತ್ತಬೇಕು. ಹಾಗೂ ಮಾಜಿ ಸಚಿವರು, ಸಂಸದರು, ಶಾಸಕರು ಕೂಡ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಕನ್ನಡ ಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷರಾದ ದೇವೇಂದ್ರಗೌಡ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿಂಧನೂರು ತಾಲೂಕು ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಹಾಗೂ ಕಲಬುರ್ಗಿ ಜಿಲ್ಲೆಗಳ ಮಧ್ಯಭಾಗದಲ್ಲಿರುವ ಸಿಂಧನೂರು ಪ್ರಮುಖವಾದ ವಾಣಿಜ್ಯ ನಗರವಾಗಿದೆ. ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ಹೊಂದುವ ಮೂಲಕ ಅತ್ಯಂತ ತೀವ್ರಗತಿಯಲ್ಲಿ ಬೆಳವಣಿಗೆಯಾಗುತ್ತಿದೆ. ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕವಾಗಿ, ವಿಶಿಷ್ಟತೆಯನ್ನು ಹೊಂದಿದೆ. ತಾಲೂಕಿನಲ್ಲಿ ವಿವಿಧ ರಾಜ್ಯಗಳ ವಿವಿಧ ಸಂಸ್ಕೃತಿಗಳ ಜನರು ಬದುಕು ಕಟ್ಟಿಕೊಂಡು ಸಂತೃಪ್ತ ಜೀವನ ನಡೆಸುತ್ತಿದ್ದಾರೆ.


ಜಿಲ್ಲಾ ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ ಎಂಜಿನಿಯರಿಂಗ್, ಡಿಪ್ಲೊಮಾ, ಎಂಜಿನಿಯ–ರಿಂಗ್ ಕಾಲೇಜುಗಳು ಸೇರಿದಂತೆ ಜಿಲ್ಲಾ ಆಸ್ಪತ್ರೆಯೂ ಸಹ ಅಗತ್ಯವಿದ್ದು, ಇವುಗಳ ಬಗ್ಗೆ ನಮ್ಮ ಶಾಶಕದ್ವಯರು ಗಮನ ಹರಿಸಬೇಕು ಎಂದರು. ನಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ಭಜಂತ್ರಿ ಮಾತನಾಡಿ, ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ಹಾಲಿ ಶಾಸಕರು, ಹಾಗೂ ವಿಧಾನ ಪರಿಷತ್ ಸದಸ್ಯರು ಧ್ವನಿ ಎತ್ತಿ ಸರ್ಕಾರದ ಗಮನ ಸೆಳೆಯಬೇಕಾಗಿದೆ. ಅಲ್ಲದೇ ಮಾಜಿ ಸಚಿವರು, ಸಂಸದರು, ಶಾಸಕರು, ಸರ್ಕಾರಕ್ಕೆ ಪತ್ರ ಬರೆದು ಈ ಭಾಗದ ಜನರ ಬಹುದಿನಗಳ ಬೇಡಿಕೆ ಈಡೇರಿಸಲು ಆಗ್ರಹಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ: ತಾಲೂಕು ಅಧ್ಯಕ್ಷ ಎಲ್.ರಾಜಾಸಾಬ್ ಗಾಂಧಿನಗರ, ನಗರ ಘಟಕದ ಅಧ್ಯಕ್ಷರಾದ ಆರ್. ಎಕ್ಸ್.ಸುರೇಶ, ತಾಲೂಕು ಉಪಾಧ್ಯಕ್ಷ ಬಸವರಾಜ, ಎಸ್.ಎಸ್.ಪಾಷಾ, ಸೇರಿದಂತೆ ಅನೇಕರಿದ್ದರು.




## ಹೃದಯಾಘಾತದಿಂದಾಗಿ ಪತ್ರಕರ್ತ ಅಶ್ರಫ್ ಹುಸೇನಿ ನಿಧನ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಸೈಯದ್ ಶಮ್ಸ್ ಆಲಂ ಹುಸೇನಿ ಅಲಿಯಾಸ್ ಸೈಯದ್ ನಸೀಮ್ ಅಶ್ರಫ್ ಹುಸೇನಿ (49 ವರ್ಷ) ಶನಿವಾರ ಬೆಳಿಗ್ಗೆ ಹೃದಯಾಘಾತದಿಂದಾಗಿ ನಿಧನರಾದರು.



ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಸೈಯದ್ ಶಮ್ಸ್ ಆಲಂ ಹುಸೇನಿ ರಹೇಮತುಲ್ಲಾ ಅಲ್ಲೆಹೆ ದರ್ಗಾ ಆವರಣದ ಕಬರಸ್ತಾನದಲ್ಲಿ ನಡೆಯಿತು. ಅಶ್ರಫ್ ಹುಸೇನಿ ಅವರು ಸಿಸಾಯತ್ ಉರ್ದು ದಿನಪತ್ರಿಕೆ, ಈಟಿವಿ ಉರ್ದು, ನ್ಯೂಸ್ 18 ಉರ್ದು, ದೂರದರ್ಶನದ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದರು.

## ಸಿಯಾತಲಾಬ್ ನಿವಾಸಿ ಮೆಹರುನ್ನೀಸಾ ಬೇಗಂ ಕಾಣೆ: ಪತ್ತೆಗೆ ಪೊಲೀಸರ ಮನವಿ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಜನವರಿ 17 (ಕರ್ನಾಟಕ ವಾರ್ತೆ): ನಗರದ ಸದರ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಸಿಯಾತಲಾಬ್ ನಿವಾಸಿ ಮೆಹರುನ್ನೀಸಾ ಬೇಗಂ ಗಂಡ ಮಹೆಬೂಬ್ ವಯಸ್ಸು (39) ಎಂಬ ಮಹಿಳೆಯು ಕಾಣೆಯಾದ ಬಗ್ಗೆ ಸದರ ಬಜಾರ್



ಪೊಲೀಸ್ ಠಾಣೆಯ ಗುನ್ನೆ ನಂಖ್ಯೆ: 65/2025 ಮಹಿಳೆ ಕಾಣೆ ಕಲಂರಡಿ ಪ್ರಕರಣ ದಾಖಲಾಗಿದೆ.

ಈ ಮಹಿಳೆಯ ಬಗ್ಗೆ ಸುಳಿವು ಸಿಕ್ಕಲ್ಲಿ ಸದರ ಬಜಾರ್ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08532–226148 ಅಥವಾ ಆರಕ್ಷಕ ನಿರೀಕ್ಷಕರ ದೂರವಾಣಿ ಸಂಖ್ಯೆ; 9480803830 ಗೆ ಮಾಹಿತಿ ನೀಡುವಂತೆ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದಿನ್ನಿ, ಮಟಮಾರಿ, ಓ ಹನುಮಪೂರ, ಗಟ್ಟುಬಿಚ್ಚಾಲಿ, ತುರುಕನಡೋಣ ಗ್ರಾಮಗಳಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕರಿಂದ ಚಾಲನೆ



ನೈಜ್ಯ ದೆಸೆ ನ್ಯೂಸ್

ರಾಯಚೂರು: ಜನವರಿ 17 (ಕ.ವಾ.): ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಜನವರಿ 17ರಂದು ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯ ದಿನ್ನಿ, ಮಟಮಾರಿ, ಓ ಹನುಮಪೂರ, ಗಟ್ಟುಬಿಚ್ಚಾಲಿ ಹಾಗೂ ತುರುಕನಡೋಣ ಗ್ರಾಮಗಳಲ್ಲಿ ಪ್ರವಾಸ ಕೈಗೊಂಡರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮೈಕ್ರೋ ಯೋಜನೆಯಡಿ ದಿನ್ನಿ ಗ್ರಾಮದಲ್ಲಿ ತೇರುಬೀದಿ ರಸ್ತೆ ನಿರ್ಮಾಣ ಕಾಮಗಾರಿಗೆ, ಮಟಮಾರಿ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ, ಓ ಹನುಮಪೂರ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾ–ರಿಗೆ, ಗಟ್ಟುಬಿಚ್ಚಾಲಿ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ, ತುರುಕನಡೋಣ, ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾ–ರಿಗೆ ಶಾಸಕರು ಭೂಮಿಪೂಜೆ ನೆರವೇರಿಸಿದರು.

ತುರುಕನಡೋಣ ಗ್ರಾಮದಲ್ಲಿ ಕೆಕೆಆರ್‌ಡಿಬಿ ಮತ್ತು ನಬಾರ್ಡ್ ಅನುದಾನದಡಿ ನಿರ್ಮಿಸಲಾದ ಪ್ರೌಢಶಾಲಾ ಕಟ್ಟಡವನ್ನು ಇದೆ ವೇಳೆ ಶಾಸಕರು ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರು, ಸುತ್ತ್ತಲಿನ ಗ್ರಾಮಗಳ ಹಿರಿಯ ಮುಖಂಡರು, ನಾಮ ನಿರ್ದೇಶಿತ ಸದಸ್ಯರು, ಅಧಿಕಾರಿಗಳು ಮತ್ತು ವಿವಿಧ ಗ್ರಾಮಗಳ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಕಾರ್ಯಕರ್ತರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಪತ್ರಕರ್ತರಿಗಾಗಿ ರಾಜ್ಯ ಮಟ್ಟದ ಕಥೆ, ಕವನ ಸ್ಪರ್ಧೆ

ನೈಜ್ಯ ದೆಸೆ ನ್ಯೂಸ್

ರಾಯಚೂರು: ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ಪತ್ರಕರ್ತರಿಗಾಗಿ ರಾಜ್ಯ ಮಟ್ಟದ ಕಥೆ, ಕವನ ಸ್ಪರ್ಧೆ ಏರ್ಪಡಿಸಲಾಗಿದೆ. ಆಯ್ಕೆಯಾದ ಕಥೆ, ಕವನ, ಲೇಖನಗಳನ್ನು ಪ್ರತ್ಯೇಕ ಮೂರು ಪುಸ್ತಕಗಳಾಗಿ ಪ್ರಕಟಿಸಲು ನಿರ್ಧರಿಸಲಾಗಿದೆ ಎಂದು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ನಗರದಲ್ಲಿ ಶನಿವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯಮಟ್ಟದ ಕವನ ಹಾಗೂ ಕಥಾ ಸ್ಪರ್ಧೆಯಲ್ಲಿ ರಾಜ್ಯದ ಯಾವುದೇ ಭಾಗದ ಪತ್ರಕರ್ತರು ಭಾಗವಹಿಸಬಹುದಾಗಿದೆ. ರಾಯಚೂರು ಜಿಲ್ಲಾ ಪತ್ರಕರ್ತ–ರಿಂದಲೂ ಪ್ರತ್ಯೇಕವಾಗಿ ಲೇಖನಗಳನ್ನು ಆಹ್ವಾನಿಸಲಾಗಿದೆ ಎಂದು ಹೇಳಿದರು. ಕಥಾ ಸ್ಪರ್ಧೆಯ ವಿಜೇತರಿಗೆ ಪ್ರಥ–ಮ ಬಹುಮಾನವಾಗಿ ?10000, ದ್ವಿತೀಯ ಬಹುಮಾನವಾಗಿ ? 7000, ತೃತೀಯ ಬಹುಮಾನವಾಗಿ ? 3,000 ನೀಡಲಾಗುವುದು. ಕವನ ಸ್ಪರ್ಧೆಯ ವಿಜೇತರಿಗೆ ?5000, ? 3000 ಹಾಗೂ ? 2000 ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವಾಗಿ ಕೊಡಲಾಗುವುದು ಎಂದರು. ಕಥೆ, ಕವನ ಸ್ಪರ್ಧೆಗೆ ಹಾಗೂ ಆಹ್ವಾನಿತ ಲೇಖನಗಳಿಗೆ ಯಾವುದೇ ನೋಂದಣಿ ಶುಲ್ಕ ಇರುವುದಿಲ್ಲ. ಸ್ಪರ್ಧೆಗೆ ಕಳುಹಿಸುವ ಕಥೆ, ಕವನ ಸ್ವರಚಿತವಾಗಿರಬೇಕು. ಯಾವುದೇ ಪುಸ್ತಕ, ಪತ್ರಿಕೆಗಳಲ್ಲಿ ಪ್ರಕಟವಾಗಿರಬಾರದು. ಕಥೆ 1500 ಗ–ರಿಷ್ಠ ಪದಮಿತಿಯಲ್ಲಿರಬೇಕು. ಸ್ಪರ್ಧೆಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಪತ್ರಕರ್ತರಾಗಿರಬೇಕು ಎಂದು ತಿಳಿಸಿದರು. ಕಥೆ, ಕವನದ ಜೊತೆ ಕೆಲಸ ಮಾಡುವ ಸುದ್ದಿ ಸಂಸ್ಥೆ ನೀಡಿದ ಗುರುತಿನ ಚೀಟಿ, ಪತ್ರ ಅಥ–ವಾ ಮಾನ್ಯತಾ ಚೀಟಿ ಕಡ್ಡಾಯ. ಒಬ್ಬ ಪತ್ರಕರ್ತ ಎರಡೂ ವಿಭಾಗದಲ್ಲಿ ಸ್ಪರ್ಧಿಸಬಹುದು ಒಂದು ಕಥೆ, ಒಂದು ಕವನ ಮಾತ್ರ ಕಳುಹಿಸಬೇಕು. ಲೇಖನ, ಕಥೆ, ಕವನವನ್ನು ನುಡಿ/ಯುನಿಕೋಡ್ ತಂತ್ರಾಂಶದಲ್ಲಿ ಸಿದ್ದಪಡಿಸಿ ಇ–ಮೇಲ್: rr-graichur@gmail.com ಗೆ ಕಳುಹಿಸಬೇಕು. ಕವನ, ಕಥೆ, ಲೇಖನಗಳನ್ನು ಫೆಬ್ರುವರಿ 25 ರೊಳಗೆ ರಾಯಚೂರಿನ ಗಿಲ್ಡ್ ಕಚೇ–ರಿಗೆ ತಲುಪಬೇಕು ಎಂದು ಹೇಳಿದರು. ರಾಯಚೂರು ಜಿಲ್ಲಾ ಪತ್ರಕರ್ತರು 400 ಪದಗಳ ಮಿತಿಯಲ್ಲಿ ಲೇಖನ ಕಳುಹಿಸಬೇಕು, ಆಯ್ಕೆಯಾದ ಲೇಖನಗಳನ್ನು ಪುಸ್ತಕದಲ್ಲಿ ಪ್ರಕಟಿಸಲಾಗುವುದು. ಲೇಖನಗಳಿಗೆ ಯಾವುದೇ ಬಹುಮಾನಗಳು ಇರುವುದಿಲ್ಲ. ಪ್ರತ್ಯೇಕ ಹಾಳೆಯಲ್ಲಿ ಸ್ವ–ಪ–ರಿಚಯ ಬರೆದು ಕಳುಹಿಸಬೇಕು. ಹೆಸರು, ವಿಳಾಸ, ಕಿರುಪರಿಚಯ, ಭಾವಚಿತ್ರ, ಮೊಬೈಲ್ ಸಂಖ್ಯೆ, ಇ–ಮೇಲ್ ವಿಳಾಸ ನಮೂದಿಸಿರಬೇಕು. ಕಥೆ, ಕವನ, ಲೇಖನಗಳ ಆಯ್ಕೆ ಸಮಿತಿ ತೀರ್ಮಾನವೇ ಅಂತಿಮವಾಗಿರಲಿದೆ ಹೆಚ್ಚಿನ ಮಾಹಿತಿಗಾಗಿ: ಮೊ.ಸಂ: 9964804206, 9739334156, 8971451949, 9902059734 ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

## ನೇಮಕಾತಿ ಪ್ರಕಟಣೆ

ಆರ್ಡನೆನ್ಸ್ ಫ್ಯಾಕ್ಟರಿ ವರಂಗಾನ್ ನೇಮಕಾತಿ 2026 ? 100 ಪದವೀಧರ/ ತಂತ್ರಜ್ಞ ಅಪ್ರೆಂಟಿಸ್ ಹುದ್ದೆಗಳಿಗೆ ಆನ್‌ಲೈನ್/ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಆರ್ಡನೆನ್ಸ್ ಫ್ಯಾಕ್ಟರಿ ವರಂಗಾನ್ ನೇಮಕಾತಿ 2026: 100 ಪದವೀಧರ/ ತಂತ್ರಜ್ಞ ಅಪ್ರೆಂಟಿಸ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಆರ್ಡನೆನ್ಸ್ ಫ್ಯಾಕ್ಟರಿ ವರಂಗಾನ್ ಜನವರಿ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಪದವೀಧರ/ ತಂತ್ರಜ್ಞ ಅಪ್ರೆಂಟಿಸ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಆರ್ಡನೆನ್ಸ್ ಫ್ಯಾಕ್ಟರಿ ವರಂಗಾನ್ ಅರ್ಜಿಗಳನ್ನು ಆಹ್ವಾನಿಸಿದೆ. ಜಲಗಾಂವ್-ಮಹಾರಾಷ್ಟ್ರ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 07-ಫೆಬ್ರವರಿ-2026 ರಂದು ಅಥವಾ ಮೊದಲು ಆನ್‌ಲೈನ್/ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಆನ್‌ಲೈನ್/ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 17-01-2026 ಆನ್‌ಲೈನ್/ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 07-ಫೆಬ್ರವರಿ-2026 ಅಧಿಕೃತ ವೆಬ್‌ಸೈಟ್: ddpdoo.gov.in

# ಕರ್ನಾಟಕ ರಾಜ್ಯ ಯುವ ಆಯೋಗವನ್ನು ಸ್ಥಾಪಿಸಲು ತಹಶೀಲ್ದಾರ್ ಮೂಲಕ ಸಿ ಎಂ ಸಿದ್ದರಾಮಯ್ಯ ನವರಿಗೆ ಮನವಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸೋಲಿಡಾರಿಟಿ ಯೂತ್ ಮೂವೆಂಟ್ ಕರ್ನಾಟಕದ ಪರವಾಗಿ, ಕರ್ನಾಟಕದ ಯುವಜನರ ಹಿತಾಸಕ್ತಿಗಳ ರಕ್ಷಣೆಗೆ ಹಾಗೂ ಅವರ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಯುವ ಆಯೋಗವನ್ನು ಸ್ಥಾಪಿಸಲು ತಹಶೀಲ್ದಾರ್ ಮೂಲಕ ಸಿ ಎಂ ಸಿದ್ದರಾಮಯ್ಯ ನವರಿಗೆ ಮನವಿಯನ್ನು ಸಲ್ಲಿಸಲಾಯಿತು.**



ಕರ್ನಾಟಕದಲ್ಲಿ ಎರಡು ಕೋಟಿಗೂ ಹೆಚ್ಚು ಯುವಜನರು ವಾಸಿಸುತ್ತಿದ್ದು, ಅವರು ಶಿಕ್ಷಣ, ಉದ್ಯೋಗ, ಮಾನಸಿಕ ಆರೋಗ್ಯ, ಸಾಮಾಜಿಕ ಭದ್ರತೆ ಮತ್ತು ನಾಗ-ರಿಕ ಭಾಗವಹಿಸುವಿಕೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಗಂಭೀರ ಸವಾಲುಗಳನ್ನು ಎದು-ರಿಸುತ್ತಿದ್ದಾರೆ. ನಿರುದ್ಯೋಗ, ಮಾನಸಿಕ ಒತ್ತಡ, ಮಾದಕ ವ್ಯಸನ, ಸೈಬರ್ ವಂಚನೆ, ಸಾಮಾಜಿ-ಕ ಅಸುರಕ್ಷತೆ ಮತ್ತು ನಿರ್ಧಾರ ಪ್ರಕ್ರಿಯೆಗಳಲ್ಲಿ ಪ್ರತಿನಿಧಿತ್ವದ ಕೊರತೆ ಮುಂತಾದ ಗಂಭೀರ ಸಮಸ್ಯೆಗಳು ಯುವಜನರಲ್ಲಿ ಹೆಚ್ಚುತ್ತಿವೆ. ರಾಜ್ಯ ಗೃಹ ಇಲಾಖೆ ಅಧಿಕೃತ ಅಂಕಿ-ಅಂಶಗಳ ಪ್ರಕಾರ, 2022 ರಿಂದ ನವೆಂಬರ್ 2025ರವರೆಗೆ ಕರ್ನಾಟಕದಲ್ಲಿ 9,450 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ ಬಹುಪಾಲು ಯುವಜನರಿಗೆ ಸಂಬಂಧಿಸಿದೆ. ವಿವಿಧ ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಅಧ್ಯಯನಗಳು ಸುಮಾರು 30% ಯುವಜನರು ಮಾನಸಿಕ ಆರೋಗ್ಯ ಸಮಸ್ಯೆಗಳು ಅಥ-'ವಾ ದೀರ್ಘಕಾಲದ ಮಾನಸಿಕ ಒತ್ತಡದಿಂದ ಬಳಲುತ್ತಿದ್ದಾರೆ ಎಂದು ಸೂಚಿಸುತ್ತವೆ.

ಅದೇ ರೀತಿ, NSSO ಸಮೀಕ್ಷೆಗಳ ಪ್ರಕಾರ ಯುವಜನರಲ್ಲಿ ದೊಡ್ಡ ಪ್ರಮಾಣದವರು ಶಿಕ್ಷಣ, ಉದ್ಯೋಗ ಅಥವಾ ತರಬೇತಿಯಲ್ಲಿ ತೊಡಗಿಸಿಕೊಳ್ಳದೇ ಇರುವ NEET (Not in Education, Employment or Training) ವರ್ಗಕ್ಕೆ ಸೇರಿದ್ದಾರೆ. ಇದ-ರಿಂದ ಅವರ ಭವಿಷ್ಯ ಮತ್ತು ರಾಜ್ಯದ ಮಾನವ ಸಂಪನ್ಮೂಲ ಅಭಿವೃದ್ಧಿಯ ಮೇಲೆ ದೀರ್ಘಕಾಲೀನ ದುಷ್ಪರಿಣಾಮ ಬೀರುತ್ತಿದೆ. 2022ರಲ್ಲಿ ರಾಜ್ಯ ಯುವ ನೀತಿ ಇದ್ದರೂ ಸಹ, ಅದರ ಪರಿಣಾಮಕಾರಿ ಅನುಷ್ಠಾನ, ವಿವಿಧ ಇಲಾಖೆಗಳ ಯುವ ಕಾರ್ಯಕ್ರಮಗಳ ಸಮನ್ವಯ, ಯುವಜನರ ಅಹವಾಲುಗಳ ಪರಿಹಾರ ಹಾಗೂ ಸಾಕ್ಷ್ಯಾಧಾರಿತ ನೀತಿ ಶಿಫಾರಸುಗಳನ್ನು ನೀಡುವ ಕಾನೂನುಬದ್ಧ ಸಂಸ್ಥೆ ರಾಜ್ಯದಲ್ಲಿ ಪ್ರಸ್ತುತ ಇಲ್ಲ. ಇದ-ರಿಂದ ಯುವ ಕಲ್ಯಾಣ ಕ್ಷೇತ್ರದಲ್ಲಿ ಗಂಭೀರ ಸಂಸ್ಥಾತ್ಮಕ ಶೂನ್ಯತೆ ಉಂಟಾಗಿದೆ.

ಕೇರಳ, ಅಸ್ಸಾಂ, ಮಿಜೋರಾಂ, ಬಿಹಾರ ಸೇರಿದಂತೆ ಹಲವು ರಾಜ್ಯಗಳಲ್ಲಿ ಈಗಾಗಲೇ ಯುವ ಆಯೋಗಗಳು ಕಾರ್ಯನಿರ್ವಹಿಸುತ್ತಿದ್ದು, ಅವು ಯುವ ಕಲ್ಯಾಣ, ಉದ್ಯೋಗ ಮಾರ್ಗದರ್ಶನ, ಮಾನಸಿಕ ಆರೋಗ್ಯ, ಮಾದಕ ವಸ್ತು ತಡೆ ಮತ್ತು ನಾಯಕತ್ವ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಹೆಚ್ಚಿನ ಯುವಜನಸಂಖ್ಯೆಯನ್ನು ಹೊಂದಿರುವ ಕರ್ನಾಟಕ ರಾಜ್ಯಕ್ಕೂ ನಹ ಇಂತಹ ಆಯೋಗದ ಅಗತ್ಯ ತೀವ್ರವಾಗಿದೆ. ಕರ್ನಾಟಕ ರಾಜ್ಯ ಯುವ ಆಯೋಗವು ಯುವ ನಾಗರಿಕರು ಮತ್ತು ಸರ್ಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಿ, ಪಾರದರ್ಶಕತೆ, ಭಾಗವಹಿಸುವಿಕೆ ಮತ್ತು ಜವಾಬ್ದಾರಿಯನ್ನು ಖಚಿತಪಡಿಸುವುದರ ಜೊತೆಗೆ ಯುವಜನರ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರ ಒದಗಿಸಬಲ್ಲದು. ಆದ್ದರಿಂದ, ಕರ್ನಾಟಕ ರಾಜ್ಯ ಯುವ ಆಯೋಗದ ಸ್ಥಾಪನೆಗಾಗಿ ಅಗತ್ಯ ಆಡಳಿತಾತ್ಮಕ ಮತ್ತು ಶಾಸನಾತ್ಮಕ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸುವಂತೆ ವಿನಮ್ರವಾಗಿ ವಿನಂತಿಸುತ್ತೇವೆ. ಈ ಮಹತ್ವದ ಪ್ರಯತ್ನದಲ್ಲಿ ನಮ್ಮ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ಭರವಸೆ ನೀಡುತ್ತೇವೆ. ಎಂದು ಮನವಿ ಮಾಡಿಕೊಂಡರು.

## ಜಿಲ್ಲಾ ಕ್ರೀಡಾಂಗಣದಲ್ಲಿ ದೇಶಿ ಕ್ರೀಡೆಗಳ ಕಲರವ

ನೈಜ್ಯ ದೆಸೆ ನ್ಯೂಸ್

**ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಅಕ್ಷರಶಃ ದೇಶಿ ಕ್ರೀಡೆಗಳ ಕಲರವ ಕಂಡುಬಂದಿತು. ಚಳಿಯ ನಡುವೆಯೂ ಲಗೋರಿ ಮತ್ತು ಚಿನ್ನಿದಾಂಡು ಸ್ಪರ್ಧೆಗಳಲ್ಲಿ ಭಾಗಿಯಾಗಲು ನಗರದ ವಿವಿಧ ಶಾಲ-ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಜಿಲ್ಲೆಯ ಯುವಜನರು ಇರುವ ಅಂ-ದಾಜು 804 ಸ್ಪರ್ಧಿಗಳು ತಲಾ 12 ಜನರು ಇರುವಂತೆ ಒಟ್ಟು 67 ತಂಡಗಳಾಗಿ ಭಾಗವಹಿಸಿ ಸ್ಪರ್ಧೆಯ ಮೆರುಗು ಹೆಚ್ಚಿಸಿದರು.**



ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ನಿಮಿತ್ತ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಗಳಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ ಚಾಲನೆ ನೀಡಿದರು. ಈ ಸ್ಪರ್ಧೆಗಳ ಮೇಲುಸ್ತುವಾರಿ ವಹಿಸಿದ್ಧ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ವೀರೇಶ ನಾಯಕ, ಶಾಲಾ ಶಿಕ್ಷಣ ಇಲಾಖೆ ಅಧಿಕಾರಿ ರಂಗಸ್ವಾಮಿ ಉಪಸ್ಥಿತರಿದ್ದರು. ಲಗೋರಿ ಸ್ಪರ್ಧೆಯಲ್ಲಿ ಪುರುಷರ 17 ತಂಡಗಳು ಮತ್ತು ಮಹಿಳೆಯರ 16 ತಂಡಗಳು, ಚಿನ್ನಿದಾಂಡು ಸ್ಪರ್ಧೆಯಲ್ಲಿ ಪುರುಷರ 18 ತಂಡಗಳು ಹಾಗೂ ಮಹಿಳೆಯರ 16 ತಂಡಗಳು ಪಾಲ್ಗೊಂಡಿದ್ದವು.

# ಮುಖಂಡ ಬಸನಗೌಡರಿಂದ ಮಾಜಿ ಯೋಧರಿಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ದೇವರ ಹಿಪ್ಪರಗಿ ಮತಕ್ಷೇತ್ರದ ಬಿಜೆಪಿ ಮುಖಂಡ ಬಸನಗೌಡ ಪಾಟೀಲ (ಯಡಿಯಾಪೂರ) ಇವರ ವತಿಯಿಂದ ತಾಲೂಕಿನ ಮಾಜಿ ಸೈನಿಕರಿಗೆ ಪ್ರವಾಸಿ ಮಂದಿರದಲ್ಲಿ ಶನಿವಾರ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬಸನಗೌಡ ಎಡಿಯಾಪೂರ ಅವರು ಮಾತನಾಡಿ ತಮ್ಮ ಜೀವವನ್ನು ಪಣಕ್ಕಿಟ್ಟು ದೇಶದ ರಕ್ಷಣೆಗಾಗಿ ಹಗಲಿರುಳು ಶ್ರಮಿಸಿದ ನಮ್ಮ ಯೋಧರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ,**

ಇಂತಹ ಅವಕಾಶ ನನಗೆ ಸಿಕ್ಕಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ.ನಾನು ನನ್ನ ಜೀವನದಲ್ಲಿ ಈ ಹಂತಕ್ಕೆ ಬರಬೇಕಾದರೆ ಒಬ್ಬನಿವೃತ್ತ ಯೋಧರ ಒಳ್ಳೆಯ ಮಾರ್ಗದರ್ಶನವೇ ಕಾರಣ ಅವರನ್ನು ನಾನೆಂದೂ ಮರೆಯುವುದಿಲ್ಲ ಎಂದ ಅವರು ಇವತ್ತು ಈ ತಾಲೂಕಿನ ನಿವೃತ್ತಿ ಯೋಧರಿಗೆ ಸನ್ಮಾನಿಸುವ ಕಾರ್ಯ ಮಾಡಿದ್ದೇನೆ ಅವರು ನಿವೃತ್ತಿಯ ನಂತರವೂ ತಮ್ಮನ್ನು ವಿವಿಧ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಸಂತೋಷದ ವಿಷಯ. ನಾನು ಮಾಡುವ ಎಲ್ಲಾ ಒಳ್ಳೆಯ ಕಾರ್ಯಗಳಲ್ಲಿ ನಿಮ್ಮೆಲ್ಲರ ಸಹಕಾರ ನನ್ನೊಂದಿಗೆ ಇರಲಿ ನಿಮ್ಮ ಮಾರ್ಗದರ್ಶನದಲ್ಲಿ ನಾನು ಕೆಲಸ ಮಾಡುತ್ತೇನೆ ಎಂದರು. ನಿವೃತ್ತ ಸೈನಿಕರಾದ ರಾಮನಗೌಡ ಬಿರಾದಾರ (ಗೊಟ-ಖಂಡಕಿ) ಹಾಗೂ ಶಾಂತಗೌಡ ಬಿರಾದಾರ ಮಾತನಾಡಿ ನಮ್ಮ ಸೇವೆಯನ್ನು ಗುರುತಿಸಿ ಗೌರವಿಸಿದ್ದಕ್ಕಾಗಿ ಮುಖಂಡ ಬಸನಗೌಡರಿಗೆ ಕೃತಜ್ಞತೆ ಸಲ್ಲಿಸುತ್ತೇವೆ. ದೇಶದ ರಕ್ಷಣೆಗಾಗಿ ಪ್ರತಿ ಕುಟುಂಬದ ಒಬ್ಬ ಸದಸ್ಯನನ್ನು ಕೊಡಲು ಇವತ್ತು ಸಮಾಜ ಮುಂದಾಗಬೇಕಾಗಿದೆ.

ಬಸನಗೌಡ ಎಡಿಯಾಪೂರ ಅವರ ಎಲ್ಲ ಒಳ್ಳೆಯ ಕಾರ್ಯಗಳಲ್ಲಿ ನಮ್ಮ ಸಂಘವು ಸಹಕರಿಸುತ್ತದೆ ಎಂದರು. ಸಮಾಜ ಸೇವಕ ಶರಣಗೌಡ ಪಾಟೀಲ(ಕರಿಭಾವಿ) ಪ್ರಸ್ತಾವಿಕವಾಗಿ ಮಾತನಾಡಿ ಭಾರತದಂತಹ ದೇಶದಲ್ಲಿ ಹುಟ್ಟಿದ ನಾವೆಲ್ಲರೂ ಪುಣ್ಯವಂತರು ದೇಶದ ರಕ್ಷಣೆ ಮತ್ತು ಸೇವೆ ಮಾಡುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ ಅದು ಯಾರ ಭಾಗ್ಯದಲ್ಲಿದಿಯೋ ಅವರಿಗೆ ಸಿಗುತ್ತದೆ ಇದೊಂದು ಅತ್ಯಂತ ಅವಿಸ್ಮರಣೀಯ ವಾದ ಕಾರ್ಯಕ್ರಮವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ(ರಿ)ಅಧ್ಯಕ್ಷ ಶ್ರೀಪಾಲ ಸಂಗಮಿ, ಗೌರವ ಅಧ್ಯಕ್ಷ ನಾನಾಗೌಡ ಬಿರಾದಾರ, ಶಂಕರಗೌಡ ನರಸಲಗಿ, ವೀರಗಂಟೆಪ್ಪ ತಳ್ಳೊಳ್ಳಿ, ಎಸ್ ಬಿ ಸಜ್ಜನ, ಬಿ.ಎಸ್.ಮುಲ್ಲಾ, ನಾಗರಾಜ ಮೇಟಿ, ಶಿವಪ್ಪ ಅಂಗಡಿ, ನೀಲಪ್ಪ ವಾಲಿ, ಎಸ್ ಕೆ ತೆಗ್ಗಿನಮನಿ, ಸೋಮನಗೌಡ ಪಾಟೀಲ, ಬಾಪುಗೌಡ ಪಾಟಿಲ, ಬಂಟನೂರ, ಗಣ್ಯರಾದ ಕೆ.ಸಿ.ದೇಸಾಯಿ ಶಳ್ಳಗಿ, ವಿಶ್ವನಾಥರೆಡ್ಡಿ ಪಾಟೀಲ ಲಕ್ಕುಂಡಿ,ಗುತ್ತಿಗೆದಾರ ಕೆ.ಶ್ರೀನಿವಾಸರೆಡ್ಡಿ ಮತ್ತಿತರರು ಇದ್ದರು.

## ರಾಯಚೂರು ಜಿಲ್ಲೆಯಲ್ಲಿ ವಿಧಾನಸಭೆ ಅಧ್ಯಕ್ಷರ ಪ್ರವಾಸ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 17 (ಕರ್ನಾಟಕ ವಾರ್ತೆ): ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ ಖಾದರ ಫರೀದ್ ಅವರು 2026ರ ಜನವರಿ 18 ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.**

ಅಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಜಕ್ಕೂರಿನಿಂದ ಹೆಲಿಕಾಪ್ಟರ್ ಮೂಲಕ ಹೊರಟು ಬೆಳಗ್ಗೆ 11.30ಕ್ಕೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹೆಲಿಪ್ಯಾಡ್ ಆಗಮಿಸಿ ಮಾನವಿಯ ಕೆ.ಜಿ.ರೋಡ್‌ನಲ್ಲಿರುವ ಅಕ್ಬರ್ ಮಸ್ಜಿದ್ ಆವರಣದಲ್ಲಿ ರಾಯಚೂರು ಜಿಲ್ಲಾ ಮಾನ್ವಿ ತಾಲೂಕಿನ ದಾರುಸ್ಸಲಾಮ್ ಫೌಂಡೇಶನ್ ಟ್ರಸ್ಟ್ ಅವರು ಆಯೋಜಿಸಿರುವ 121ನೇ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಮಧ್ಯಾಹ್ನ 2 ಗಂಟೆಗೆ ಮಾನ್ವಿಯಿಂದ ನಿರ್ಗಮಿಸಿ ರಸ್ತೆ ಮೂಲಕ ಹೈದರಾಬಾದ್‌ಗೆ ಪ್ರಯಾಣ ಬೆಳೆಸುವರು ಎಂದು ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಡಿವಾಳ ಮಾಚಿದೇವ ಜಯಂತಿ ಸಿದ್ಧತೆಯ ಪೂರ್ವಭಾವಿ ಸಭೆ.

## ರಾಯಚೂರು ಉತ್ಸವದಲ್ಲಿ ಪುಸ್ತಕ ಪ್ರದರ್ಶನ, ಮಾರಾಟ ಮಳಿಗೆ ತೆರೆಯಲು ಅವಕಾಶ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 17 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ ಫೆಬ್ರವರಿ 5, 6 ಮತ್ತು 7ರಂದು ರಾಯಚೂರು ಜಿಲ್ಲಾಡಳಿತದಿಂದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026 ನಿಗದಿಯಾಗಿದ್ದು, ಈ ಉತ್ಸವದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ತೆರೆಯಲು ಜಿಲ್ಲಾಡಳಿತ ಅನುವು ಮಾಡಿಕೊಟ್ಟಿದೆ.**

ಆಸಕ್ತ ಪ್ರಕಾಶಕರು, ಲೇಖಕರು ತಮ್ಮ ಮಳಿಗೆಗಳನ್ನು ಬುಕಿಂಗ್ ಮಾಡಲು ರಾಯಚೂರು ಜಿಲ್ಲೆಯ ಮುಖ್ಯ ಗ್ರಂಥಾಲಯ ಅಧಿಕಾರಿ, ಜಿಲ್ಲಾ ಕೇಂದ್ರ ಗ್ರಂಥಾಲಯ ರಾಯಚೂರು ಮೊ:9449928944 ಇವರಿಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಉತ್ಸವ-2026ರ ಪ್ರಚಾರಾರ್ಥ ವಾಲಿಬಾಲ್, ಕಬ್ಬಡಿ ಪಂದ್ಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 17 (ಕ.ವಾ.): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಜನವರಿ 17ರಂದು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ವಾಲಿಬಾಲ್, ಕಬ್ಬಡಿ ಕ್ರೀಡಾಕೂಟಕ್ಕೆ ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷ ರಾಣಿ ಅವರು ಚಾಲನೆ ನೀಡಿದರು.**





ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಿಂದ ಸುಮಾರು 600ಕ್ಕೂ ಹೆಚ್ಚು ವಿದ್ಯಾರ್ಥಿಗಳ ಸುಮಾರು 75 ತಂಡಗಳಾಗಿ ವಿವಿಧ ಕ್ರೀಡೆಯಲ್ಲಿ ಭಾಗಿಯಾದರು. ಕಬ್ಬಡಿಯಲ್ಲಿ ಪುರುಷರ 20 ತಂಡಗಳು ಮತ್ತು ಮಹಿಳೆಯರ 10 ತಂಡಗಳು ಭಾಗಿಯಾಗಿದ್ದವು. ಅಲ್ಲದೆ ವಾಲಿಬಾಲನಲ್ಲಿ ಪುರುಷರ 25 ತಂಡಗಳು ಮತ್ತು ಮಹಿಳೆಯರ 20 ತಂಡಗಳು ಭಾಗಿಯಾಗಿದ್ದವು. ಇದೇ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಸಮಿತಿ ಕಾರ್ಯದರ್ಶಿ ಹಾಗೂ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ವೀರೇಶ ನಾಯಕ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ ರಂಗಸ್ವಾಮಿ, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಪರುಶರಾಮ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸೂಪರಿಡೆಂಟ್ ಸಂತೋಷ್, ಚಂದ್ರಶೇಖರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ ಇದ್ದರು.

# ಮಂಗಳವಾರಪೇಟೆಯ ನಿವಾಸಿ ರಾಜಪ್ಪ ಕಾಣೆ: ಪತ್ತೆಗೆ ಪೊಲೀಸರ ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 17 (ಕರ್ನಾಟಕ ವಾರ್ತೆ): ನಗರದ ಅಶೋಕ ಡಿಪೋ ಹತ್ತಿರದ ಮಂಗಳವಾರಪೇಟೆಯ ನಿವಾಸಿ ರಾಜಪ್ಪ ತಂದೆ ಮಹಾದೇವಪ್ಪ (31) ಎಂಬ ಯುವಕ ದಿನಾಂಕ 04-12-2025ರ ಸಂಜೆ 06 ಗಂಟೆಯ ಸುಮಾರಿಗೆ ಮನೆಯಿಂದ ಹೊರಗೆ ಹೋಗಿ ಬರುತ್ತೇನೆ ಅಂತಾ ಹೇಳಿ ಹೋದವನು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು,**



ಈ ಕುರಿತು ಸದರ್ ಬಜಾರ ಪೊಲೀಸ್ ಠಾಣೆಯಲ್ಲಿ ಗುನ್ನ ಸಂಖ್ಯೆ: 02/2026ಕಲಂ ಮನುಷ್ಯ ಕಾಣೆ ಅಡಿ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ. ಕಾಣೆ ವ್ಯಕ್ತಿಯ ಚಹರೆ: 31 ವಯಸ್ಸು, 5.5 ಅಡಿ ಎತ್ತರ, ಕಪ್ಪು ಬಣ್ಣದ ಕೂದಲು, ಕಪ್ಪು ಮೈ ಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ನೀಲಿ ಬಣ್ಣದ ತುಂಬು ತೋಳಿನ ಅಂಗಿ ಹಾಗೂ ಕಪ್ಪು ಬಣ್ಣದ ಫಾರ್ಮುಲಾ ಪ್ಯಾಂಟ್ ಬಟ್ಟೆ ಧರಿಸಿದ್ದಾನೆ. ಕನ್ನಡ, ತೆಲುಗು ಹಾಗೂ ಹಿಂದಿ ಭಾಷೆ ಮಾತನಾಡುತ್ತಾನೆ. ಈ ಚಹರೆವುಳ್ಳ ವ್ಯಕ್ತಿಯು ಕಂಡುಬಂದಲ್ಲಿ ಸದರ್ ಬಜಾರ್ ಪೊಲೀಸ್ ಠಾಣೆಯ ದೂರವಾಣಿ

# ಸಾವಯುವ, ನೈಸರ್ಗಿಕ ಕೃಷಿ ಲಾಭದಾಯಕ: ಅಮರೇಗೌಡ

ನೈಜ್ಯ ದೆಸೆ ನ್ಯೂಸ್

**ರಾಯಚೂರು: 'ಇಂದು ಭೂಮಿ ಸತ್ವವಿಲ್ಲದಂತಾಗಿದೆ. ಅದರ ಸ್ವಾಭಾವಿಕ ಉತ್ಪಾದನಾ ಸಾಮಥ-ರ್ಥ್ಯ ಕಡಿಮೆಯಾಗಿದೆ. ಅತಿಯಾದ ಲಾಭದ ಉದ್ದೇಶದಿಂದ ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ ಬಳಕೆಯಿಂದ ಉತ್ಪದನಾ ವೆಚ್ಚ ಹೆಚ್ಚಾಗಿದೆ. ಹೀಗಾಗಿ ಎಲ್ಲ ಸಮಸ್ಯೆಗಳಿಗೆ ಸಾವಯವ ಮತ್ತು ನೈಸರ್ಗಿಕ ಕೃಷಿಯೇ ಪರಿಹಾರ' ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎ.ಅಮರೇಗೌಡ ಅಭಿಪ್ರಾಯಪಟ್ಟರು.**




ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು, ಕ್ರಿಭ್ಕೊ ಲಿಮಿಟೆಡ್, ಸಾವಯವ ಕೃಷಿ ಸಂಶೋಧನಾ ಸಂಸ್ಥೆ ಮತ್ತು ಕೃಷಿ ಇಲಾಖೆ ಆಶ್ರಯದಲ್ಲಿ ಏರ್ಪಡಿಸಿದ್ದ ಸಾವಯವ ಮತ್ತು ನೈಸರ್ಗಿಕ ಕೃಷಿಯ ತಂತ್ರಜ್ಞಾನಗಳ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. 'ಭೂಮಿಯಲ್ಲಿ ಸೂಕ್ಷ್ಮಾಣು ಜೀವಿಗಳು ನಾಶವಾಗಿವೆ. ಅವುಗಳನ್ನು ಪುನಶ್ಚೇತನ ಮಾಡುವ ಅಗತ್ಯವಿದೆ. ಸಾವಯವ ಮತ್ತು ನೈಸರ್ಗಿಕ ಕೃಷಿಯ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸಬೇಕಾಗಿದೆ. ಮುಖ್ಯವಾಗಿ ಸಾವಯವ ಮತ್ತು ನೈಸರ್ಗಿಕ ಕೃಷಿಗೆ ಪಶು ಸಂಗೋಪನೆಯೇ ಆಧಾರವಾಗಿದೆ' ಎಂದು ತಿಳಿಸಿದರು. ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಪ್ರಕಾಶ ಚವ್ಹಾಣ ಮಾತನಾಡಿ, 'ಮಣ್ಣು ಎಲ್ಲ ಬೆಳೆಗಳಿಗೆ ಮೂಲವಾಗಿದೆ. ಮಣ್ಣು ಮತ್ತು ನೀರು ಸಂರಕ್ಷಣಾ ಕ್ರಮಗಳು ಪ್ರಧಾನವಾಗಿವೆ. ಸಾವಯವ ವಸ್ತುಗಳ ಮರು ಬಳಕೆಯಿಂದ ಭೂ ಫಲವತ್ತತೆ ಹೆಚ್ಚುತ್ತದೆ' ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಎ.ಆರ್.ಕುರುಬರ ಮಾತನಾಡಿ, 'ಇತ್ತೀಚಿನ ದಿಗಳಲ್ಲಿ ಉತ್ಪದನಾ ವೆಚ್ಚ ಹೆಚ್ಚಾಗುತ್ತಿದೆ. ನಿವ್ವಳ ಆದಾಯ ರೈತ-ರಿಗೆ ದೊರೆಯುತ್ತಿಲ್ಲ. ಆದ್ದರಿಂದ ಬಾಹ್ಯ ರಾಸಾಯನಿಕ ಪರಿಕರಗಳನ್ನು ಕಡಿಮೆ ಮಾಡಿ ನೈಸರ್ಗಿಕವಾಗಿ ದೊರೆಯುವ ಸಗಣಿ, ಗೋಮೂತ್ರ, ಜೀವಾಮೃತ ಮುಂತಾದವುಗಳನ್ನು ಬಳಸಿ ಭೂ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳಬೇಕು' ಎಂದು ಹೇಳಿದರು. ಸಾವಯವ ಕೃಷಿ ಸಂಶೋಧನಾ ಸಂಸ್ಥೆ ಮುಖ್ಯಸ್ಥ ಎಂ.ಎ.ಬಸವಣ್ಣೆಪ್ಪ ಮಾತನಾಡಿ, 'ನೈಸರ್ಗಿಕ ಕೃಷಿ ಮೂಲ ತತ್ವಗಳಾದ ಬೀಜಾಮೃತ, ಜೀವಾಮೃತ, ಹೊದಿಕೆ ಮತ್ತು ವಾಪಸ್ ಪದ್ದತಿಗಳನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕು' ಎಂದು ತಿಳಿಸಿದರು. ಕೃಷಿ ಇಲಾಖೆಯ ಉಪಕೃಷಿ ನಿರ್ದೇಶಕ ನಯೀಮ್ ಹುಸೇನ್, ಕ್ರಿಭ್ಕೊ ಸಂಸ್ಥೆಯ ವ್ಯವಸ್ಥಾಪಕ ಶಶಿಕುಮಾರ, ಸಹಾಯಕ ಕೃಷಿ ನಿರ್ದೇಶಕಿ ದೀಪಾ ಎಲ್., ಕೃಷಿ ಸಮುದಾಯ ಬಾನುಲಿ ಕೇಂದ್ರದ ಕಾರ್ಯಕ್ರಮ ಸಹಾಯಕ ಅಮರೇಶ ಆಶಿಹಾಳ, ಪ್ರಗತಿಪರ ರೈತ ಮುನಿಯಪ್ಪ ನಾಯಕ, ಅಮರೇಶ ಮತ್ತು ಮಾರೆಪ್ಪ ನಾಯಕ ಅವರು ಅನುಭವ ಹಂಚಿಕೊಂಡರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಎಸ್ಸಿ. ಇನ್ ಆಪರೇಷನ್ ಥಿಯೇಟರ್

ಬಿ.ಎಸ್ಸಿ. ಇನ್ ಆಪರೇಷನ್ ಥಿಯೇಟರ್ ತಂತ್ರಜ್ಞಾನ ನಿರ್ದೇಶನವು ಆಪರೇಷನ್ ಥಿಯೇಟರ್‌ನ ಎಲ್ಲಾ ಕೆಲಸ ಮತ್ತು ನಿಯಂತ್ರಣದೊಂದಿಗೆ ಗುರುತಿಸಲ್ಪಟ್ಟಿದೆ. ರೋಗಿಗಳೊಂದಿಗೆ ವ್ಯವಹರಿಸಲು ಮತ್ತು ಆಪರೇಷನ್ ಥಿಯೇಟರ್‌ನ ಸಂಕೀರ್ಣ ವಿವರಗಳನ್ನು ನೋಡಲು ಈ ಅಪ್ಲಿಕೇಶನ್ ಅಭ್ಯರ್ಥಿಗಳನ್ನು ಸಿದ್ಧಪಡಿಸುತ್ತದೆ. ಪರೀಕ್ಷಕರ ಸಮಯದಲ್ಲಿ, ಅರ್ಜಿದಾರರು ಎಲ್ಲಾ ಶಸ್ತ್ರಚಿಕಿತ್ಸಾ ಉಪಕರಣಗಳ ಬಗ್ಗೆ ಮತ್ತು ಅವುಗಳ ಸೋಂಕುಗಳೆತ ಮತ್ತು ಕ್ರಿಮಿನಾಶಕತೆಯ ಬಗ್ಗೆ ಕಾಳಜಿ ವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅಭ್ಯರ್ಥಿಗಳು ಕಾರ್ಯಾಚರಣೆಗಳ ಸಮಯದಲ್ಲಿ ತಜ್ಞರಿಗೆ ಸಹಾಯ ಮಾಡುತ್ತಾರೆ ಮತ್ತು ಶಸ್ತ್ರಚಿಕಿತ್ಸಾ ಕಾರ್ಯಾಚರಣೆಯ ಅವಧಿಗೆ ಔಷಧಗಳು, ಅರಿವಳಿಕೆ ಅನಿಲಗಳು, ಪರದೆಗಳು ಮತ್ತು ಕ್ರಿಮಿನಾಶಕ ಅವಶ್ಯಕತೆಗಳೊಂದಿಗೆ ಬಹುತೇಕ ಹೋರಾಡುತ್ತಾರೆ. ಅವರು ಪುನಃಸ್ಥಾಪನೆ ಸೌಲಭ್ಯಗಳು ಮತ್ತು ಕೇಂದ್ರಗಳಲ್ಲಿ ಐಸಿಯುಗಳು, ಸಿಸಿಯುಗಳು ಮತ್ತು ಆಪರೇಟಿಂಗ್ ಥಿಯೇಟ-ರ್‌ಗಳ ಸುಗಮ ಚಾಲನೆಯನ್ನು ನಿಭಾಯಿಸುತ್ತಾರೆ. ಸರ್ಕಾರಿ ಮತ್ತು ಖಾಸಗಿ ಚೇತರಿಕೆ ಸೌಲಭ್ಯಗಳು ಮತ್ತು ಶಸ್ತ್ರಚಿಕಿತ್ಸಾ ವಾರ್ಡ್‌ಗಳನ್ನು ಹೊಂದಿರುವ ಕೇಂದ್ರಗಳು ಆಪರೇಷನ್ ಥಿಯೇಟರ್ ವೃತ್ತಿಪರರನ್ನು ನೇಮಿಸಿಕೊಳ್ಳುತ್ತವೆ. ಉನ್ನತ ಪರೀಕ್ಷೆಗಳ ನಂತರ, ಒಬ್ಬರು ಪ್ರಮುಖ ತಯಾರಿ ಸಂಸ್ಥೆಗಳಲ್ಲಿ ಶಿಕ್ಷಕ ಅಥವಾ ಬೋಧಕರ ಪಾತ್ರವನ್ನು ಸಹ ಧರಿಸಬಹುದು. ಬಿ.ಎಸ್ಸಿ. ಅರಿವಳಿಕೆ ಮತ್ತು ಆಪರೇಷನ್ ಥಿಯೇಟ-ರ್ ತಂತ್ರಜ್ಞಾನದಲ್ಲಿ ಪ್ರವೇಶ ಪಡೆಯಲು, ಅಭ್ಯರ್ಥಿಯು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಿಂದ ಗುರುತಿಸಲ್ಪಟ್ಟ ಹತ್ತು ವರ್ಷಗಳ ಶಾಲಾ ಶಿಕ್ಷಣದ ನಂತರ ಎರಡು ವರ್ಷಗಳ ಪೂರ್ವ-ವಿಶ್ವವಿದ್ಯಾಲಯ ಪರೀಕ್ಷೆ / ಪದವಿ ಪೂರ್ವ ಪರೀಕ್ಷೆ / ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರವನ್ನು ಪ್ರಧಾನ ಅಧ್ಯಯನ ಕೋರ್ಸ್‌ಗಳಾಗಿ ತೆಗೆದುಕೊಂಡು ಅದಕ್ಕೆ ಸಮಾನವಾದ ಎರಡು ವರ್ಷಗಳ ನಂತರ ಉತ್ತೀರ್ಣರಾಗಿರಬೇಕು.

1ನೇ ಪುಟದಿಂದ....

ಮಂಡನೆಗೂ ಮುನ್ನಾ ತಮಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡಬೇಕು ಎಂದು ಪಟ್ಟು ಹಿಡಿದಿದ್ದರು ಎಂದು ಹೇಳಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ನಾಯಕತ್ವ ಬದಲಾವಣೆ ಮಾಡಿದರೆ ಅದು ರಾಜ್ಯಗಳ ವಿಧಾನಸಭೆಯ ಚುನಾವಣೆ ಫಲಿತಾಂಶದ ಮೇಲೆ ಅಡ್ಡ ಪರಿಣಾಮ ಬೀರಲಿದೆ. ಮುಂಬೈ ಮಹಾನಗರ ಪಾಲಿಕೆ ಸೇರಿದಂತೆ ಎಲ್ಲಾ ಚುನಾವಣೆಗಳಲ್ಲೂ ಕಾಂಗ್ರೆಸ್ ಗೆ ಹಿನ್ನಡೆಯಾಗಿದೆ. ಬಹು ನಿರೀಕ್ಷಿತ ಬಿಹಾರದಲ್ಲೂ ಕಾಂಗ್ರೆಸ್ ಗೆಲುವು ಸಾಧ್ಯವಾಗಿಲ್ಲ. ಪಂಚ ರಾಜ್ಯಗಳ ಪೈಕಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಅಸ್ಸಾಂನಲ್ಲಿ ಹೆಚ್ಚಿನ ಅವಕಾಶಗಳಿವೆ. ಕರ್ನಾಟಕದ ರಾಜಕಾರಣದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಅಸ್ಸಾಂನಲ್ಲಿನ ಗೆಲುವಿನತ್ತ ಗಮನ ಹರಿಸುವಂತೆ ಡಿ.ಕೆ.ಶಿವಕುಮಾರ್ ಅವರಿಗೆ ಸಲಹೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಅಸ್ಸಾಂ ಚುನಾವಣೆಯ ಬಳಿಕ ಹೈಕಮಾಂಡ್ ನಿಲುವೇನು ಎಂಬ ಬಗ್ಗೆ ಸ್ಪಷ್ಟತೆ ನೀಡುವಂತೆ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದು, ಸೂಕ್ತ ಸಂದರ್ಭದಲ್ಲಿ ನಿಮ ಶ್ರಮ ಮತ್ತು ಬದ್ಧತೆಗೆ ಪ್ರತಿಫಲ ಸಿಗಲಿದೆ. ನಿಮ ಪಕ್ಷ ನಿಷ್ಠೆಯ ಬಗ್ಗೆ ವರಿಷ್ಠರಿಗೆ ಅರಿವಿದೆ. ನಿಮ ಕಾಳ-ಜಿಯನ್ನು ನಾವು ನೋಡಿಕೊಳ್ಳುತ್ತೇವೆ. ಈಗ ವಹಿಸಿರುವ ಜವಾಬ್ದಾರಿಗಳ ನಿರ್ವಹಣೆಯತ್ತ ನಿಮ ಗಮನ ಇರಲಿ ಎಂದು ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ ಎನ್ನಲಾಗಿದೆ. ಸಂಕ್ಷಿಪ್ತ ಅವಧಿಯಲ್ಲಿನ ಮಾತುಕತೆಯಿಂದ ಡಿ.ಕೆ.ಶಿವಕುಮಾರ್ ಉತ್ಸಾಹ ಇಮಡಿಯಾಗಿದೆ ಎಂಬ ಮಾಹಿತಿ ಇದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸವಿತಾ ಮಹರ್ಷಿ ಜಯಂತಿ: ಪೂರ್ವಭಾವಿ ಸಿದ್ಧತಾ ಸಭೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 17 (ಕರ್ನಾಟಕ ವಾರ್ತೆ): ಜಿಲ್ಲಾಡಳಿತದಿಂದ ಸವಿತಾ ಮಹರ್ಷಿ ಜಯಂತಿಯನ್ನು ಇದೇ ಜನವರಿ 27ರಂದು ಆಚರಣೆ ಮಾಡಲಾಗುತ್ತಿದ್ದು, ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳ ಕಚೇರಿಯ ತಹಶಿಲ್ದಾರ್ ಜಗದೀಶ್ ಅವರು ಹೇಳಿದರು.**

ಜನವರಿ 16ರಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಸವಿತಾ ಮಹಿರ್ಷಿ ಜಯಂತಿ ಆಚ-ರಣೆ ಕುರಿತು ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸವಿತಾ ಮಹರ್ಷಿ ಜಯಂತಿ ನಿಮಿತ್ತ ಸವಿತಾ ಮಹರ್ಷಿ ಭಾವಚಿತ್ರದ ಮೆರವಣಿಗೆಯು ಕಲಾ ತಂಡಗಳೊಂದಿಗೆ ಜನವರಿ 27ರಂದು ಬೆಳಿಗ್ಗೆ 09 ಗಂಟೆಗೆ ನಗರದ ಗೋವಿಂದ ರಾಜ್ ಪೆಟ್ರೋಲ್ ಬಂಕ್ ಹತ್ತಿರವಿರುವ ಸವಿತಾ



ಮಹರ್ಷಿ ವೃತ್ತದಿಂದ ಆರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಗರದ ರಂಗಮಂದಿರದವರೆಗೆ ಸಾಗಲಿದೆ. ಈ ನಿಮಿತ್ತ ನಗರದ ಪ್ರಮುಖ ರಸ್ತೆಗಳನ್ನು ಶುಚಿಗೊಳಿಸಬೇಕು.

ಎಲ್ಲಾ ವೃತ್ತಗಳನ್ನು ಅಲಂಕಾರಗೊಳಿಸಬೇಕು ಎಂದು ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬೆಳಿಗ್ಗೆ 11ಕ್ಕೆ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ರಂಗಮಂದಿರದ ಸುತ್ತಲಿನ ಪರಿಸರವನ್ನು ಶುಚಿಯಾಗಿಡಬೇಕು. ಅಲಂಕಾರಗೊಳಿಸಬೇಕು. ಸೇರುವ ಜನತೆಗೆ ಅನುಕೂಲವಾಗುವಂತೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು. ಸವಿತಾ ಮಹರ್ಷಿ ಜಯಂತಿ ನಿಮಿತ್ತ ಉಪನ್ಯಾಸ, ಆಹ್ವಾನ ಪತ್ರಿಕೆ ವಿತರಣೆ ಸೇರಿದಂತೆ ಎಲ್ಲಾ ಸಿದ್ಧತಾ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಡೆಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಯಾ ಗ್ರಾಮ ಪಂಚಾಯತಗಳಲ್ಲಿ ದಿನಾಚರಣೆಯು ಕಡ್ಡಾಯವಾಗಿ ಆಚ-ರಣೆ ಆಗಬೇಕು. ಜಿಲ್ಲಾ ಮಟ್ಟದ ಹಾಗೂ ರಾಯಚೂರು ತಾಲೂಕುಮಟ್ಟದ ಎಲ್ಲ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯು ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ತಪ್ಪದೇ ಭಾಗಿಯಾಗಬೇಕು. ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಸವಿತಾ ಮಹರ್ಷಿ ಜಯಂತಿಯನ್ನು ಆಚ-ರಣೆ ಮಾಡಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ವಿ.ಗೋವಿಂದ್, ಶ್ರೀನಿವಾಸ್, ಬಸವರಾಜ, ಎ.ಎಸ್.ರಾಮು, ಆನಂದ, ಎನ್.ವೆಂಕಟ್, ಎಸ್.ಅನಿಲ್ ಕುಮಾರ್, ಡಿ.ನಾಗರಾಜ್, ಜಿ.ಆನಂದ, ಚಂದ್ರಶೇಖರ, ಸುರೇಶ ಸೇರಿದಂತೆ ಜಿಲ್ಲಾಧಿಕಾರಿಗಳ ಕಚೇರಿಯ ಸಿಬ್ಬಂದಿ ಮಲ್ಲೇಶ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿಗಳಾದ ದ್ರಾಕ್ಷಿ, ವಿನೋದ್ ಇನ್ನಿತರರು ಉಪಸ್ಥಿತರಿದ್ದರು.

# ಮುಖಂಡ ಬಸನಗೌಡರಿಂದ ಪತ್ರಕರ್ತರಿಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ದೇವರ ಹಿಪ್ಪರಗಿ ಮತಕ್ಷೇತ್ರದ ಬಿಜೆಪಿ ಮುಖಂಡ ಸಮಾಜ ಸೇವಕ ಬಸನಗೌಡ ಪಾಟೀಲ ಯಡಿಯಾಪೂರ ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಪತ್ರಕರ್ತ-ರಿಗೆ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಪತ್ರಿಕಾ ರಂಗ ಪ್ರಜಾಪ್ರಭುತ್ವದ ನಾಲ್ಕನೇಯ ಅಂಗವಾಗಿದೆ,**

ಸಾಮಾಜಿಕ ಜವಾಬ್ದಾರಿಯನ್ನು ಹೊತ್ತು ಹಗಲಿರುಳು ಎನ್ನದೆ ಕೆಲಸ ಮಾಡುತ್ತಿರುವ ಪತ್ರಕರ್ತರ ಸೇವೆಯನ್ನು ಗುರುತಿಸಿ ಅವರನ್ನು ಗೌರವಿಸುವುದು ಸಮಾಜದ ಜವಾಬ್ದಾರಿಯಾಗಿದೆ ಈ ಹಿನ್ನೆಲೆಯಲ್ಲಿ ನಾನು ನಿಮ್ಮನ್ನು ಗೌರವಿಸುವಂತಹ ಕೆಲಸ ಮಾಡುತ್ತಿದ್ದೇನೆ. ಜನರ ಸೇವೆ ಮಾಡುವ ಉದ್ದೇಶದಿಂದ ನಾನು ಈ ಕ್ಷೇತ್ರಕ್ಕೆ ಬಂದಿದ್ದೇನೆ, ಯಾದಗಿರಿ ಜಿಲ್ಲಾ ಪಂಚಾಯತ್ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವ ನನಗಿದೆ ಕಳೆದ 30 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿದ್ದೇನೆ ಕಾಂಗ್ರೆಸ್ ಪಕ್ಷದಿಂದ ನನ್ನ ರಾಜಕೀಯ ಜೀವನ ಆರಂಭಿಸಿದ್ದು ಕಾರಣಾಂತರಗಳಿಂದ ಅಲ್ಲಿಂದ ಹೊರಬಂದು ಈಗ ಬಿಜೆಪಿಯ ಪಕ್ಷದಲ್ಲಿದ್ದು ಕೆಲಸ ಮಾಡುತ್ತಿದ್ದೇನೆ ನನಗೆ ಪ್ರತಿ ಹಂತದಲ್ಲಿಯೂ ನಿಮ್ಮ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನದ ಅಗತ್ಯವಿದೆ,

ನನ್ನ ಈ ಸನ್ಮಾನವನ್ನು ಸ್ವೀಕರಿಸಿದ್ದಕ್ಕೆ ನಿಮಗೆಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು. ಸಮಾಜ ಸೇವಕ ಶರಣಗೌಡ ಪಾಟೀಲ (ಕರಿಭಾವಿ) ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪತ್ರಕರ್ತರಾದ ರವಿ ಕಟ್ಟಿಮನಿ,ಅಂಬಾಜಿ ಘೋರ್ಪಡೆ, ಅಬ್ದುಲ್ ಗನಿ ಮಕಾನದಾರ, ಪ್ರವೀಣ ಘೋರ್ಪಡೆ, ಸಂಜಯಸಿಂಗ್ ರಜಪೂತ,ಸಂಗನಗೌಡ ಗಬಸಾವಳಗಿ,ವಿ-ಜಯ ಕಲಾಲ, ರಾಜೇಶ ಇನಾಮದಾರ, ಸುನೀಲ ಅಂಬಿಗೇರ, ಪ್ರವೀಣ ರೆಡ್ಡಿ, ಮುಖಂಡರಾದ ಕೆ.ಸಿ. ದೇಸಾಯಿ, ಗುತ್ತಿಗೆದಾರ ಕೆ ಶ್ರೀನಿವಾಸ ರೆಡ್ಡಿ ಮತ್ತಿತರರು ಇದ್ದರು.

# ಮಡಿವಾಳ ಮಾಚಿದೇವ ಜಯಂತಿಗೆ ಅಗತ್ಯ ಸಿದ್ಧತೆಯಾಗಲಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 17 (ಕರ್ನಾಟಕ ವಾರ್ತೆ): ಜಿಲ್ಲಾಡಳಿತದಿಂದ ಫೆ.01ರಂದು ನಡೆಯುವ ಮಡಿವಾಳ ಮಾಚಿದೇವ ಜಯಂತಿಗೆ ಎಲ್ಲಾ ರೀತಿಯ ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳಬೇಕೆಂದು ಜಿಲ್ಲಾಧಿಕಾ-ರಿಗಳ ಕಚೇರಿಯ ತಹಶೀಲ್ದಾರ್ ಜಗದೀಶ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಜನವರಿ 16ರ ಶುಕ್ರವಾರ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇ-ರಿಯ ಸಭಾಂಗಣದಲ್ಲಿ ಮಡಿವಾಳ ಮಾಚಿದೇವ ಜಯಂತಿ ಆಚರಣೆ ಕು-ರಿತು ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಫೆ.01ರಂದು ನಗರದ ಆರ್.ಟಿ.ಓ ಕಚೇರಿಯ



ಹತ್ತಿರದ ಮಡಿವಾಳ ಮಾಚಿದೇವ ವೃತ್ತದಿಂದ ಬೆಳಿಗ್ಗೆ 9ರಿಂದ ಮಡಿವಾಳ ಮಾಚಿದೇವ ಅವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಇರುತ್ತದೆ. ಕಾರ್ಯಕ್ರಮಕ್ಕೆ ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಗಣ್ಯ ಮಹನಿಯರಿಗೆ ವಿತರಿಸಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಬೇಕು.

ಜಯಂತಿ ಹಿನ್ನೆಲೆಯಲ್ಲಿ ಫೆ.1ರಂದು ನಗರದ ಎಲ್ಲಾ ವೃತ್ತಗಳಲ್ಲಿ ದೀಪಾಲಂಕಾರ ಮಾಡಬೇಕು. ಪ್ರಮುಖ ರಸ್ತೆಗಳನ್ನು ಸ್ವಚ್ಛತೆಗೊಳಿಸಬೇಕು. ಜಿಲ್ಲಾ ರಂಗಮಂದಿರದ ಆವರಣವನ್ನು ಅಲಂಕಾರಗೊಳಿಸಬೇಕು. ಉಪನ್ಯಾಸಕರಿಗೆ ಆಹ್ವಾನ ನೀಡಬೇಕು. ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಯಬೇಕು ಎಂದು ಆಯಾ ಇಲಾಖೆಯ ಅಧಿಕಾ-ರಿಗಳಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಜಿ.ಶಿವಮೂರ್ತಿ, ಆಂಜೀನಯ್ಯ, ಇ.ಚಂದಪ್ಪ, ಜಮುನಾ ಕೇಶವ, ಅಶ್ವಿನಿ ಎಮ್., ಎ.ಚಂದ್ರಶೇಖರ, ನಾಗರಾಜ್, ಹನುಮಂತ, ಶಾಂತಪ್ಪ, ಜಿ.ವೆಂಕಟೇಶ ಮಾಡಿವಾಳ, ಜಿ.ಸೂಗಪ್ಪ, ಎಸ್.ಹನುಮಂತಪ್ಪ, ವಿರೂಪಾಕ್ಷಿ, ಹೆಚ್.ಮುನಿಸ್ವಾಮಿ, ಗೋವಿಂದ್, ಡಿ.ಶಿವರಾಜಕುಮಾರ್ ಸೇರಿದಂತೆ ಜಿಲ್ಲಾಧಿಕಾ-ರಿಗಳ ಕಚೇರಿಯ ಸಿಬ್ಬಂದಿ ಮಲ್ಲೇಶ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿ ದ್ರಾಕ್ಷಿ, ವಿನೋದ್ ಹಾಗೂ ಇನ್ನೀತರರು ಇದ್ದರು.

# ಭಾವಪೂರ್ಣ ಶ್ರದ್ಧಾಂಜಲಿ ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ಮಾಜಿ ಸಚಿವರು, ವೀರಶೈವ ಲಿಂಗಾಯತ ಮಹಾಸಭೆಯ ಮಾಜಿ ಅಧ್ಯಕ್ಷರು, ಲಿಂಗಾಯತ ಸಮಾಜದ ಮೇರು ನಾಯಕರು

ನೈಜ್ಯ ದೆಸೆ ನ್ಯೂಸ್

**ಬೀದರ್: ಲೋಕ ನಾಯಕರೆಂದೇ ಖ್ಯಾತರಾಗಿದ್ದ ಭೀಮಣ್ಣ ಖಂಡ್ರೆ ಅವರದ್ದು ಈ ದೇಶ ಕಂಡ ಅಪರೂಪದ ವ್ಯಕ್ತಿತ್ವ. ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಚಳವಳಿಯ ಗೀಳು ಹಚ್ಚಿಸಿಕೊಂಡು ದೇಶಕ್ಕಾಗಿ ಹೋರಾಡಿದವರು. ಲಿಂಗೈಕ್ಯ ಚನ್ನಬಸವ ಪಟ್ಟದ್ದೇವರ ಜೊತೆಗೂಡಿ ನೂತನ ಅನುಭವ ಮಂಟಪ ನಿರ್ಮಾಣಕ್ಕೆ ಕೈಜೋಡಿಸಿದವರು. ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಹೋರಾಡಿ, ನಿಜಾಂ ಸರ್ಕಾರದ ವಿರುದ್ಧ ಬಂಡಾಯವೆದ್ದು ತಿರಂಗಾ ಧ್ವಜ ಹಾರಿಸಿ ಸೆರೆವಾಸ ಅನುಭವಿಸಿದವರು.**

ಮುಂದೆ ಡಾ. ಜಯದೇವಿತಾಯಿ ಲಿಗಾಡೆ, ಪ್ರಭುರಾವ್ ಕಂಬಳಿವಾಲೆ ಮೊದಲಾದವರು ಸೇರಿ ಕರ್ನಾಟಕ ಏಕೀಕರಣ ಚಳವಳಿಯ ಸಹಭಾಗಿ-ತ್ವ ಪಡೆದು ಬೀದರ್ ಜಿಲ್ಲೆಯ ಅನೇಕ ಪ್ರದೇಶಗಳನ್ನು ಕರ್ನಾಟಕದಲ್ಲಿ ಉಳಿಸಿಕೊಂಡವರು. ಗಡಿ ಭಾಗವಾದ ಬೀದರ್ ಜಿಲ್ಲೆಯಲ್ಲಿ ಕನ್ನಡ ನಾಡು, ನುಡಿ, ನೆಲ, ಜಲ, ಜನಹಿತಕ್ಕಾಗಿ ಅಹರ್ನಿಶಿ ದುಡಿದ ಧೀಮಂತ ನಾಯಕರು. ರಾಜಕೀಯ ಉದ್ಯಮವಲ್ಲ, ಅದೊಂದು ಸೇವಾವಲಯವೆಂದು ಭಾವಿಸಿದ ಮಹಾಮುತ್ಸದ್ದಿಗಳು. ಕೋಟಿ ವಿದ್ಯಗಿಂತ ಮೇಟಿ ವಿದ್ಯೆ ಲೇಸೆಂಬ ಲೋಕೋಕ್ತಿಗೆ ಬದ್ದರಾದ ಭೀಮಣ್ಣ ಖಂಡ್ರೆ ಅವರು ರೈತರ ಹಿತಕ್ಕಾಗಿ ಅಹರ್ನಿಶಿ ದುಡಿದವರು. ಅದರ ಭಾಗವಾಗಿಯೇ ಕೃಷಿಕರಿಗಾಗಿ ಬೀಜಾಂದೋಲನ, ರಾಷ್ಟ್ರಮಟ್ಟದ ಕಿಸಾನ್ ರ‍್ಯಾಲಿ ಮಾಡಿದಲ್ಲದೆ ಬಿ.ಎಸ್.ಎಸ್.ಕೆ ಆರಂಭಿಸಿದವರು. ಕೃಷಿ ಅಭಿವೃದ್ಧಿ ಸಂಬಂಧಿತ ಲೋಕಜ್ಞಾನ ಪಡೆಯಲು ವಿದೇಶಗಳನ್ನು ಸುತ್ತಿ, ಕೃಷಿ ಪ್ರೀತಿ ಮೆರೆದವರು.

1949-50ರ ಕಾಲಾವಧಿಯಲ್ಲಿ ಬೀದರ್ ಭಾಗವು ಹೈದರಾಬಾದ್ ಪ್ರಾಂತ್ಯದ ವೆಲ್ಲೋಡಿ ಸರ್ಕಾರದ ಅಧೀನದಲ್ಲಿದ್ದು ಸರ್ಕಾರವು ಹೆಚ್ಚಿನ ಕಂದಾಯವನ್ನು ವಸೂಲಿ ಮಾಡುತ್ತಿತ್ತು. ಅದರ ವಿರುದ್ಧ ಹೋರಾಟಕ್ಕೆ ಮುಂದಾದರು. ರೈತರ ಸಮಸ್ಯೆಗಳನ್ನು ಬಲ್ಲ ಪ್ರಭುರಾವ್ ಕಂಬಳಿವಾಲೆ, ಕಿಸಾನ ಪರಿಷತ್ತಿನ ಪ್ರಾಂತೀಯ ಅಧ್ಯಕ್ಷರಾಗಿದ್ದ ಆರ್.ವಿ. ಬಿಡಪ್, ಕಾಶಪ್ಪ ಖಂಡ್ರೆ, ಭೀಮಣ್ಣ ಖಂಡ್ರೆ, ಮಹಾದಪ್ಪ ಮೀಸೆ, ಧರ್ಮಪಾಲ್ ಮೊದಲಾದವರು ರೈತರ ಮೇಲಾಗುತ್ತಿದ್ದ ಶೋಷಣೆಯ ಬಗ್ಗೆ ಚರ್ಚಿಸಿ ಒಂದು ಕಿಸಾನ ಮೋರ್ಚಾವನ್ನು ಹೈದರಾಬಾದಿಗೆ ತೆಗೆದುಕೊಂಡು ಹೋಗಲು ನಿರ್ಧರಿಸಲಾಯಿತು. ರೈತ ಹೋರಾಟದ ಅಧ್ಯಕ್ಷರಾಗಿದ್ದ ಆರ್.ವಿ. ಬಿಡಪ್, ಮಹಾದೇವ ಸಿಂಗ್ ನೇತೃತ್ವದಲ್ಲಿ ಹೋರಾಟಕ್ಕೆ ಅಣಿಯಾದರು. ಈ ಬಗ್ಗೆ ಭೀಮಣ್ಣ ಖಂಡ್ರೆಯವರು 'ಚಲೋ ಶಾಹ ಮಂಜಿಲ್' ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಂಡರು. ಭಾಲ್ಕಿಯ ಜಾಹಗೀರದಾರರಾಗಿದ್ದ ದತ್-ಉದ್-ದೌಲಾ ವಿರುದ್ಧ ಕೋರ್ಟ್‌ನಲ್ಲಿ ಹೂಡಲಾಗಿದ್ದ ದಾವೆ ಬಗ್ಗೆ ಮತ್ತು ರೈತರ ಸಮಸ್ಯೆಯನ್ನು ಶೀಘ್ರವಾಗಿ ಪರಿಶೀಲಿಸುವ ದಿಶೆಯಲ್ಲಿ ಚರ್ಚಿಸಲು ವಕೀಲರಾಗಿದ್ದ ಮಜಗೆಯವರ ಸಲಹೆಯನ್ನು ಖಂಡ್ರೆಯವರು ಪಡೆದರು.

ಘೋಂಗಡಿಹೊತ್ತ 1,400 ಜನರ ರೈತರೊಂದಿಗೆ ಕೂಡಿಕೊಂಡು ಹೈದರಾಬಾದಿನವರೆಗೆ ಪಾದಯಾತ್ರೆ ಮಾಡಿದರು. ಶಾಹ ಮಂಜಿಲ್ ಎದುರುಗಡೆ 1951ರ ಜೂನ್ 6ರಂದು ಧರಣಿ ಕೂತರು. 15 ಎಕರೆ ಜಮೀನು ಇರುವ ರೈತರ ಕಂದಾಯವನ್ನು ಮನ್ನಾ ಮಾಡಬೇಕೆಂಬ ಪ್ರಮುಖ ಬೇಡಿಕೆಯನ್ನಿತ್ತರು. ಮುಖ್ಯಮಂತ್ರಿ ಎಂ.ಕೆ. ವೆಲ್ಲೋಡಿ ಅವರು ಕಂದಾಯ ಮಂತ್ರಿಗಳಾಗಿದ್ದ ಬಿ. ರಾಮಕಿಶನರಾವ್ ಮತ್ತು ವಿನಾಯಕರಾವ್ ಕೊರಟಕರ್ ಅವರನ್ನು ಸಂಪರ್ಕಿಸಿ ಭೂಕಂದಾಯ ಮತ್ತು ಲೇವಿಗಳಲ್ಲಿದ್ದ ತಾರತಮ್ಯವನ್ನು ಸರಿಪಡಿಸಿದರು. ಆದರೆ ಎಂ.ಕೆ. ವೆಲ್ಲೋಡಿ ನೇತೃತ್ವದ ಸರ್ಕಾರವು ರೈತರ ಕಂದಾಯದ ಶೇಕಡಾ 50ರಷ್ಟು ಹೊರೆಯನ್ನು ಕಡಿಮೆ ಮಾಡಿತು. ಇದು ಭೀಮಣ್ಣ ಖಂಡ್ರೆಯವರು ಕಾರ್ಯದರ್ಶಿಗಳಾಗಿ ಹಮ್ಮಿಕೊಂಡ ಹೋರಾಟಕ್ಕೆ ಸಂದ ಮೊದಲನೆಯ ಜಯವಾಗಿತ್ತು.

ಭೀಮಣ್ಣ ಖಂಡ್ರೆ ಅವರು 1967ರ ಚುನಾವಣೆಯಲ್ಲಿ ಗೆದ್ದು, ವಿಧಾನಸಭೆಯಲ್ಲಿ ಕಾರಂಜಾ ನೀರಾವರಿ ಯೋಜನೆಗೆ ಮಂಜೂರಿ ಪಡೆದಿರುವುದ-



ರಿಂದ ಬೀದರ್ ಜಿಲ್ಲೆಯ ಕೆಲಮಟ್ಟಿನ ರೈತರಿಗಾದರೂ ಈ ಕಾರಂಜಾ ಯೋಜನೆಯ ಫಲ ದೊರಕುವಂತಾಯಿತು. ರಾಜ್ಯ ಮಟ್ಟದ ಮೊದಲ ರೈತ ಸಮ್ಮೇಳನವನ್ನು ಭಾಲ್ಕಿಯ ಚನ್ನಬಸವೇಶ್ವರ ಕಾಲೇಜು ಆವರಣದಲ್ಲಿ 1980ರ ಜನವರಿ 21ರಂದು ಆಯೋಜಿಸಲಾಗಿತ್ತು. ನಾಡಿನ ಮೂಲೆಮೂಲೆಯಿಂದಲೂ ರೈತ ಪ್ರತಿನಿಧಿಗಳು ಸೇರಿ ಎರಡು ಲಕ್ಷ ಜನ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಂದಿನ ಮುಖ್ಯಮಂತ್ರಿ ಆರ್. ಗುಂಡೂರಾವ್ ಸಮ್ಮೇಳನವನ್ನು ಉದ್ಘಾಟಿಸಿದ್ದರು. ಎಂ.ಎಫ್ ಖಾನ್, ಆರ್.ವೈ. ಘೋರ್ಪಡೆ, ಕೆ.ಎಚ್. ಪಾಟೀಲರು ಈ ಸಮ್ಮೇಳನದ ಮುಖ್ಯ ಅತಿಥಿಗಳಾಗಿದ್ದರು. ಈ ಸಮ್ಮೇಳನದಲ್ಲಿ ಮಾರಾಟ ತೆರಿಗೆ ರದ್ದತಿ, ಸಾಲ ಮನ್ನಾ, ಸುಲಭ ಬೆಲೆಯಲ್ಲಿ ಬಿತ್ತನೆ ಬೀಜ ವಿತರಣೆ, ಕೃಷಿ ಉತ್ಪನ್ನಗಳ ಬೆಲೆ ನಿರ್ಧಾರ, ಸಬ್ಸಿಡಿ ದರದಲ್ಲಿ ರಸಗೊಬ್ಬರ ಪೈರೈಕೆ, ಕಡಿಮೆ ಬೆಲೆಯಲ್ಲಿ ಕೃಷಿ ಸಾಮಗ್ರಿಗಳ ವಿತರಣೆಯಂತಹ ಅನೇಕ ಪ್ರಮುಖವಾದ ವಿಷಯಗಳನ್ನು ಚರ್ಚಿಸಿ ಸಮ್ಮೇಳನದಲ್ಲಿ 20 ನಿರ್ಣಯಗಳನ್ನು ಮಂಡಿಸಿದರು.

ಅವುಗಳನ್ನು ಪರಿಶೀಲಿಸಲು ಸರ್ಕಾರವು 16 ಜನ ಪರಿಣಿತರ ಸಮಿತಿಯನ್ನು ರಚಿಸಿತು. ಆ ಸದಸ್ಯರಲ್ಲಿ ಡಾ. ಭೀಮಣ್ಣ ಖಂಡ್ರೆ ಕೂಡಾ ಒಬ್ಬರಾಗಿದ್ದರು. 20 ಬೇಡಿಕೆಗಳ ಪೈಕಿ ಸರ್ಕಾರವು 16 ಬೇಡಿಕೆಗಳಿಗೆ ಒಪ್ಪಿಗೆ ನೀಡಿತು. ಡಾ. ಭೀಮಣ್ಣ ಖಂಡ್ರೆಯವರು ಕಿಸಾನ್ ಸೆಲ್ ಕರ್ನಾಟಕ ಘಟಕದ ಅಧ್ಯಕ್ಷರಾಗಿ, 1981ರ ಫೆಬ್ರವರಿ 16ರಂದು ದೆಹಲಿಯಲ್ಲಿ ನಡೆದ ರೈತ ಸಮ್ಮೇಳನದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದಿಂದಲೇ 16,000 ರೈತರನ್ನು ದೆಹಲಿಗೆ ಕರೆದೊಯ್ದಿದ್ದರು. ಕರ್ನಾಟಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ, ರೈತ ಕುಟುಂಬದ ವಾರಸುದಾರರೂ ಆಗಿದ್ದರಿಂದ ಈ ಸಂಘಟನೆಯ ನೇತೃತ್ವವಹಿಸಲು ಅವರಿಗೆ ಸಾಧ್ಯವಾಯಿತು. ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಇಂದಿರಾ ಗಾಂಧಿ ಅವರು ಖಂಡ್ರೆಯವರನ್ನು ಮುಕ್ತಕಂಠದಿಂದ ಪ್ರಶಂಶಿಸಿದರು.

ಆ ಸಮ್ಮೇಳನದಲ್ಲಿ ಮಂಡಿಸಲಾದ ಗೊತ್ತುವಳಿಗಳ ಪರಿಣಾಮವಾಗಿ ಕರ್ನಾಟಕ ಸರ್ಕಾರ ರೈತರ ಹಕ್ಕುಗಳ ರಕ್ಷಣೆಗಾಗಿ ಭೂ ಸುಧಾರಣಾ ಕಾಯ್ದೆ ಜಾರಿಗೊಳಿಸಿತು. ದೇವರಾಜ ಅರಸು ಸರ್ಕಾರ ಈ ಕಾಯ್ದೆ ತರುವ ಮೂಲಕ ರೈತ ಸಮುದಾಯದ ಪಾಲಿಗೆ ಆಶಾಕಿರಣವಾದಂತಾಯಿತು. ರೈತರ ಆ ಸಂತೋಷದ ಹಿಂದೆ ಭೀಮಣ್ಣ ಖಂಡ್ರೆಯವರ ಪರಿಶ್ರಮ ಮರೆಯುವಂತಿಲ್ಲ. ರಾಜ್ಯ ರೈತರ ಮೂರನೆಯ ಸಮ್ಮೇಳನವನ್ನು 1982ರ ನವೆಂಬರ್ 8ರಂದು ಭಾಲ್ಕಿಯಲ್ಲಿ ಆಯೋಜಿಸಿದಾಗ ಎಐಸಿಸಿ ಕಾರ್ಯದರ್ಶಿಯಾಗಿದ್ದ ರಾಜೀವ್ ಗಾಂಧಿಯವರನ್ನು ಆಹ್ವಾನಿಸಲಾಗಿತ್ತು. ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರ ಮುಂದೆ ರೈತರ ಬೇಡಿಕೆಗಳನ್ನು ಮಂಡಿಸಿ, ಶೇಕಡಾ 50ರಷ್ಟು ಮಾರುಕಟ್ಟೆ ಶುಲ್ಕ ಕಡಿಮೆ ಮಾಡಿಸಿದ ಕೀರ್ತಿ ಭೀಮಣ್ಣ ಖಂಡ್ರೆಯವ-ರಿಗೆ ಸಲ್ಲುತ್ತೆ. ಭೀಮಣ್ಣ ಖಂಡ್ರೆಯವರು ರೈತರ ಪ್ರತಿನಿಧಿಯಾಗಿ ಸಮ್ಮೇಳನದಲ್ಲಿ ಮಾತನಾಡುತ್ತ- 'ರೈತರ ಹಲವು ದುಃಖ ದುಮ್ಮಾನಗಳಿಗೆ ಹೆಚ್ಚಿನ ಕಂದಾಯ, ಮಾರುಕಟ್ಟೆಯ ಶುಲ್ಕ ಪ್ರಮುಖ ಕಾರಣವಾಗಿವೆ.

ಕಂದಾಯ ವಸೂಲಿಯ ಕಠಿಣ ಕ್ರಮಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸಮಾವೇಶದಲ್ಲಿ ಮಾತಾಡಿದನ್ನು ಪರಿಗಣಿಸಿ ರಾಜೀವ್ ಗಾಂಧಿಯವರು ಸಮ್ಮೇಳನದಲ್ಲಿಯೇ ಕರ್ನಾಟಕದ ಅಂದಿನ ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರಿಗೆ ಕಂದಾಯ ಕಡಿಮೆ ಮಾಡುವಂತೆ ಸೂಚನೆ ನೀಡಿದರು. ಅದು ಕರ್ನಾಟಕದ ರೈತರಿಗೆ ಬಹಳಷ್ಟು ಅನುಕೂಲವಾಯಿತು. ವಿಶೇಷವಾಗಿ ಈ ರೈತ ಸಮ್ಮೇಳನವು ಖಂಡ್ರೆಯವರನ್ನು ಪ್ರಸಿದ್ಧಿಗೆ ತಂದ ಫಲವಾಗಿ 1983ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ವಿಧಾನ ಸಭೆಗೆ ಅವರನ್ನು ಆಯ್ಕೆಮಾಡಿ ಜನ ಋಣತೀರಿಸಿದರು. ಪ್ರಾಕೃತಿಕ ವಿಕೋಪದಿಂದ 1997-98ರ ಅವಧಿಯಲ್ಲಿ ಹಿಂಗಾರು ಮತ್ತು ಮುಂಗಾರು ಬೆಳೆ ಬರಲಿಲ್ಲ. ಮೇಲಾಗಿ ಆಯಸಿಡಿಕ್ ರೇನ್ ಎಂಬ ಬೆಂಕಿಮಳೆ ಸುರಿಯಿತು. ಅಷ್ಟಿಷ್ಟು ಪ್ರಮಾಣದಲ್ಲಿ ಬೆಳೆದ ಬೆಳೆಗಳೆಲ್ಲ ನಾಶವಾದವು. ರೈತರು ಕಂಗಾಲಾದರು.

ಆಗಿನ ಜನತಾ ದಳ ಸರ್ಕಾರ ಸ್ಪಂದಿಸದಿದ್ದಾಗ ಬೀದರ್ ಜಿಲ್ಲೆಯಲ್ಲಿ ಸುಮಾರು 23 ರೈತರು ಆತ್ಮಹತ್ಯೆ ಮಾಡಿಕೊಂಡರು. . ಇದನ್ನು ಗಂಭೀರವಾಗಿ ಪರಿಗಣಿಸಿದ ಭೀಮಣ್ಣ ಖಂಡ್ರೆಯವರು ಸ್ವತಃ ತಾವೇ ಮುಂದಾಳತ್ವ ವಹಿಸಿ 1998ರ ಮಾರ್ಚ್ 7ರಂದು ಬೀದರ್ ಜಿಲ್ಲಾಧಿಕಾರಿ ಕಚೇರಿ ಎದುರು ರೈತರೊಂದಿಗೆ ಪ್ರತಿಭಟನೆ ಮಾಡಿ ಧರಣಿ ಕುಳಿತರು. ಬೆಂಕಿಮಳೆ ಪ್ರಕೋಪಕ್ಕೆ ಸ್ಪಂದಿಸುತ್ತಿದ್ದ ಖಂಡ್ರೆಯವರ ಸಂಘಟನಾ ಶಕ್ತಿಗೆ ಮೆಚ್ಚಿಕೊಂಡ ಸೋನಿಯಾ ಗಾಂಧಿಯವರು 1998ರ ಜೂನ್ 26ರಂದು ಭಾಲ್ಕಿಗೆ ಆಗಮಿಸಿದ್ದರು. ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ವತಿಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿರೈತ ಕುಟುಂಬಗಳಿಗೆ ಹತ್ತು ಸಾವಿರ ರೂಪಾಯಿಗಳ ಚೆಕ್ ವಿತರಿಸಿ ನೊಂದ ರೈತ ಕುಟುಂಬಕ್ಕೆ ಪ್ರಾಣ ಮಿತ್ರರಾದರು. ಇದರಿಂದಾಗಿ ಕರ್ನಾಟಕ ಸರ್ಕಾರವು ಜಂಟಿ ಸದನ ಸಮಿತಿಯ ವರದಿಯಂತೆ ಸಂತ್ರಸ್ತ ರೈತರಿಗೆ ಪರಿಹಾರ ನೀಡಲು ಒಪ್ಪಿಕೊಂಡಿತು. ಆದರೆ ಪರಿಹಾರ ಧನವು ರೈತರಿಗೆ ಸಮರ್ಪಕವಾಗಿ ತಲುಪಲಿಲ್ಲ. ಆ ಬಗ್ಗೆ ಸಾಕಷ್ಟು ಹೋರಾಟ ಮಾಡಿದರೂ ಸರ್ಕಾರ ಸ್ಪಂದಿಸಲಿಲ್ಲ. ಆದಕಾರಣ ಖಂಡ್ರೆಯವರು ಮಾನವಹಕ್ಕು ಆಯೋಗದಲ್ಲಿ, ಸುಪ್ರೀ ಕೋರ್ಟಿನಲ್ಲಿ ನ್ಯಾಯಸಮ್ಮತ ರೀತಿಯಲ್ಲಿ ಹೋರಾಟ ಮಾಡಿ ರೈತ-ರಿಗೆ ನ್ಯಾಯ ಒದಗಿಸಿಕೊಟ್ಟು ಧೀಮಂತಿಕೆ ಮೆರೆದರು.